# ಅಸ್ತಿತ್ವ ಮತ್ತು ಅಂತರ: ಪರಕೀಯತೆಯ ತಾತ್ವಿಕ ಯಾನ

**ಮಲ್ಲೇಶಪ್ಪ ಸಿದ್ರಾಂಪೂರ***

**DOI: https://doi.org/10.5281/zenodo.21189257**

**ABSTRACT**

'ಪರಕೀಯತೆ' (Alienation) ಎನ್ನುವುದು ವ್ಯಕ್ತಿಯು ತನ್ನದೇ ಅಸ್ತಿತ್ವ, ಶ್ರಮ, ಮತ್ತು ಸಮಾಜದಿಂದ ವಿಘಟಿತನಾಗಿ, ತನ್ನ ಬದುಕಿನಲ್ಲೇ ತಾನು ಅತಿಥಿಯಾಗುವ ತೀವ್ರವಾದ ಆಂತರಿಕ ಬಿಕ್ಕಟ್ಟಾಗಿದೆ. ಕಾರ್ಲ್ ಮಾರ್ಕ್ಸ್‌ನ ಆರ್ಥಿಕ ಶೋಷಣೆಯ ಚಿಂತನೆ, ಸಾರ್ತ್ರೆ ಮತ್ತು ಕಾಮೂರ ಅಸ್ತಿತ್ವವಾದಿ ತಳಮಳ, ಡರ್ಕಿಮ್ ಹಾಗೂ ವೆಬರ್ ವಿಶ್ಲೇಷಿಸುವ ಮೌಲ್ಯಗಳ ಕುಸಿತ ಮತ್ತು ಸಾಂಸ್ಥಿಕ ಬಂಧನಗಳು ಪರಕೀಯತೆಯ ವಿವಿಧ ಆಯಾಮಗಳನ್ನು ಬಿಚ್ಚಿಡುತ್ತವೆ. ಕಾಫ್ಕಾ, ಎಲಿಯಟ್ ಮತ್ತು ಬೆಕೆಟ್ ಮುಂತಾದವರ ಸಾಹಿತ್ಯದಲ್ಲಿ ಇದು ಜೀವಂತ ಅನುಭವವಾಗಿ ಮಾರ್ಪಟ್ಟಿದೆ. ಕೇವಲ ತಾತ್ವಿಕ ಪರಿಕಲ್ಪನೆಯಾಗಿರದೆ, ಆಧುನಿಕ ಹಾಗೂ ಡಿಜಿಟಲ್ ಯುಗದ ಮಾನವನ ಮೂಲಭೂತ ಸಮಸ್ಯೆಯಾಗಿರುವ ಈ ಪರಕೀಯತೆಯನ್ನು ಫ್ರಾಯ್ಡ್ ಮತ್ತು ಫ್ರಾಮ್ ಅವರ ಮನೋವೈಜ್ಞಾನಿಕ ನೆಲೆಯಲ್ಲಿಯೂ ವಿಶ್ಲೇಷಿಸಲಾಗಿದೆ. ಒಟ್ಟಾರೆಯಾಗಿ, ನಮ್ಮ ಅಸ್ತಿತ್ವದ ಅರ್ಥಹೀನತೆ ಮತ್ತು ಆಂತರಿಕ ಶೂನ್ಯತೆಯನ್ನು ಅರಿತುಕೊಂಡು, 'ಪ್ರಾಮಾಣಿಕ ಅಸ್ತಿತ್ವ'ದತ್ತ (Authentic existence) ಹೆಜ್ಜೆ ಹಾಕುವ ಮಾರ್ಗವನ್ನು ಇಲ್ಲಿ ಶೋಧಿಸಲಾಗಿದೆ.

**KEYWORDS:** ಪರಕೀಯತೆ, ಅಸ್ತಿತ್ವವಾದ, ಸಾಮಾಜಿಕ ವಿಘಟನೆ, ಪ್ರಾಮಾಣಿಕ ಅಸ್ತಿತ್ವ, ಆಂತರಿಕ ಶೂನ್ಯತೆ.

* **ಮಲ್ಲೇಶಪ್ಪ ಸಿದ್ರಾಂಪೂರ,** ಸಹಾಯಕ ಪ್ರಾಧ್ಯಾಪಕ, ದ್ರಾವಿಡ ವಿಶ್ವವಿದ್ಯಾಲಯ, ಶ್ರೀನಿವಾಸವನಂ, ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ.

'ಪರಕೀಯತೆ' ಎಂಬ ಪರಿಕಲ್ಪನೆ ಮಾನವನ ಅಸ್ತಿತ್ವದ ಒಳನಿಲುವಿನಲ್ಲೇ ನೆಲೆಸಿರುವ ಒಂದು ಗಾಢ ಅನುಭವ. ಇದು ಕೇವಲ ಏಕಾಂತದ ಅನುಭವವಲ್ಲ, ವ್ಯಕ್ತಿಯು ತನ್ನದೇ ಅಸ್ತಿತ್ವದಿಂದ ವಿಘಟಿತನಾಗುವ ಸ್ಥಿತಿ; ತನ್ನಿಂದಲೇ ದೂರವಾಗುವ ಅನುಭವ. ಈ ನೇಪಥ್ಯದಲ್ಲಿ ಪರಕೀಯತೆ ಎಂದರೆ 'ನಾನು ನನ್ನದೇ ಲೋಕದಲ್ಲಿ ಅತಿಥಿ' ಎಂಬ ಅರಿವು. ಅಂದರೆ ವ್ಯಕ್ತಿ ತನ್ನ ಜೀವನದ ಕೇಂದ್ರದಲ್ಲಿದ್ದರೂ, ತನ್ನ ಜೀವನದ ಅರ್ಥದೊಂದಿಗೆ ಆಂತರಿಕ ಸಂಬಂಧವನ್ನು ಕಳೆದುಕೊಳ್ಳುವ ಸ್ಥಿತಿ. ಈ ವಿಘಟಿತ ಸ್ಥಿತಿಯು ವ್ಯಕ್ತಿಯ ಸ್ವರೂಪ, ಸಂಸ್ಕೃತಿ, ಶ್ರಮ ಮತ್ತು ಅರ್ಥಾನ್ವೇಷಣೆಗಳ ನಡುವಿನ ಸಂಬಂಧಗಳನ್ನು ಬಿಚ್ಚಿಡುತ್ತದೆ. ಹೀಗಾಗಿ ಪರಕೀಯತೆ ಒಂದು ಕ್ಷಣಿಕ ಮನೋಭಾವವವೂ ಅಲ್ಲ, ಕೇವಲ ಒಂಟಿತನದ ಅನುಭವವೂ ಅಲ್ಲ; ಅದು ಮಾನವ ಬದುಕಿನ ರಚನೆಯೊಳಗೆ ನೆಲೆಗೊಂಡಿರುವ ಅಸ್ತಿತ್ವಾತ್ಮಕ ಸ್ಥಿತಿ. ಮಾನವನು ತನ್ನದೇ ಅಸ್ತಿತ್ವದಿಂದ ದೂರವಾಗುವ ಆಂತರಿಕ ಸ್ಥಿತಿ. ನಮ್ಮ ಬದುಕುಗಳು ಖಾಲಿ ಅನ್ನಿಸುವುದು ಯಾಕೆ? ನಾವು ಬಹಳ ಕ್ರಿಯಾಶೀಲರಾಗಿ ಓದುತ್ತೇವೆ, ಕೆಲಸ ಮಾಡುತ್ತೇವೆ, ಸಂಬಂಧಗಳನ್ನು ಬೆಳೆಸುತ್ತೇವೆ, ಮನೋರಂಜನೆಗಳಲ್ಲಿ ತೊಡಗುತ್ತೇವೆ, ಆದರೂ ನಮ್ಮೊಳಗೆ ಒಂದು ಅಂತರ ಉಳಿಯುತ್ತದೆ. ಈ ಅಂತರವೇ ಪರಕೀಯತೆ. ಇದು ಬದುಕಿನ ಅರ್ಥಹೀನತೆಯ ಅರಿವಾಗಿ, ಸಂಬಂಧಗಳ ಶೂನ್ಯತೆಯಾಗಿ ಮತ್ತು ಸ್ವರೂಪದಿಂದ ಬೇರ್ಪಟ್ಟು ವ್ಯಕ್ತವಾಗುತ್ತದೆ.

ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಈ ಪರಿಕಲ್ಪನೆ ವಿಭಿನ್ನ ಆಯಾಮಗಳಲ್ಲಿ ವ್ಯಕ್ತವಾಗಿದೆ. ಕಾರ್ಲ್ ಮಾರ್ಕ್ಸ್‌ನ ಚಿಂತನೆಗಳಲ್ಲಿ ಪರಕೀಯತೆ ಆರ್ಥಿಕ-ಸಾಮಾಜಿಕ ವ್ಯವಸ್ಥೆಯ ಪರಿಣಾಮವಾಗಿ ಕಾಣಿಸಿಕೊಂಡು, ಕಾರ್ಮಿಕನು ತನ್ನ ಶ್ರಮದಲ್ಲೇ ಅನ್ಯನಾಗುವ ಸ್ಥಿತಿಗೆ ತಳ್ಳಲ್ಪಡುತ್ತಾನೆ. ಇಲ್ಲಿ ಶ್ರಮವು ವ್ಯಕ್ತಿಯ ಸ್ವಾತಂತ್ರ್ಯದ ಅಭಿವ್ಯಕ್ತಿಯಾಗದೆ, ಅವನನ್ನು ತನ್ನ ಮಾನವೀಯತೆಯಿಂದಲೇ ದೂರ ಮಾಡುವ ಸಾಧನವಾಗುತ್ತದೆ. ಮತ್ತೊಂದೆಡೆ ಜೀನ್ ಪಾಲ್ ಸಾರ್ತ್ರೆ ಮತ್ತು ಅಲ್ಬರ್ಟ್ ಕಾಮೂ ಅವರ ಅಸ್ತಿತ್ವವಾದ ಚಿಂತನೆಗಳಲ್ಲಿ ಪರಕೀಯತೆಯು ವ್ಯಕ್ತಿಯ ಆಂತರಿಕ ಅನುಭವವಾಗಿ ರೂಪುಗೊಳ್ಳುತ್ತದೆ. ಸ್ವಾತಂತ್ರ್ಯದ ಅನಿವಾರ್ಯತೆ ಮತ್ತು ಅರ್ಥಹೀನತೆಯ ಅರಿವು ವ್ಯಕ್ತಿಯನ್ನು ತನ್ನದೇ ಅಸ್ತಿತ್ವದೊಂದಿಗೆ ಮುಖಾಮುಖಿಯಾಗುವಂತೆ ಮಾಡುತ್ತದೆ. ಆದರೆ ಈ ಮುಖಾಮುಖಿಯಲ್ಲಿಯೇ ಅವನು ತನ್ನೊಳಗಿನ ವಿಘಟನೆಯನ್ನು ಅನುಭವಿಸುತ್ತಾನೆ. ಸಾಹಿತ್ಯದಲ್ಲಿ ಈ ಪರಕೀಯತೆ ಇನ್ನಷ್ಟು ಸ್ಪಷ್ಟ ಮತ್ತು ಜೀವಂತ ರೂಪ ಪಡೆದುಕೊಳ್ಳುತ್ತದೆ. ಫ್ರಾಂಜ್ ಕಾಫ್ಕಾನ ಕಥನಗಳಲ್ಲಿ ವ್ಯಕ್ತಿ ತನ್ನದೇ ದೇಹ ಮತ್ತು ಕುಟುಂಬದೊಳಗೆ ಅನ್ಯನಾಗುತ್ತಾನೆ. ಟಿ.ಎಸ್. ಎಲಿಯಟ್‌ನ ಕಾವ್ಯದಲ್ಲಿ ಆಧುನಿಕ ನಾಗರಿಕತೆಯ ಆತ್ಮಶೂನ್ಯತೆ ವ್ಯಕ್ತವಾಗುತ್ತದೆ. ಸ್ಯಾಮ್ಯುಯೆಲ್ ಬೆಕೆಟ್‌ನ ನಾಟಕಗಳಲ್ಲಿ ಅರ್ಥವಿಲ್ಲದ ನಿರೀಕ್ಷೆಯ ಮಧ್ಯೆ ಬದುಕುವ ಮಾನವನ ಸ್ಥಿತಿ ವ್ಯಕ್ತವಾಗುತ್ತದೆ. ಈ ಎಲ್ಲ ಸಾಹಿತ್ಯಕ ರೂಪಗಳು ಪರಕೀಯತೆಯನ್ನು ಕೇವಲ ತತ್ವಶಾಸ್ತ್ರೀಯ ಕಲ್ಪನೆಯನ್ನಾಗಿಯಷ್ಟೇಯಲ್ಲದೆ ಅನುಭವಾತ್ಮಕ ಸತ್ಯವಾಗಿ ನಿರೂಪಿಸುತ್ತವೆ. ಈ ಚಿಂತನೆಗಳನ್ನೆಲ್ಲ ಒಟ್ಟುಗೂಡಿಸಿದಾಗ ಒಂದು ಮೂಲಭೂತ ಸಂಗತಿ ಸ್ಪಷ್ಟವಾಗುತ್ತದೆ. ಮಾನವನು ತನ್ನದೇ ನಿರ್ಮಿತ

ಜಗತ್ತಿನೊಳಗೆ ತನ್ನ ಸ್ಥಾನವನ್ನು ಕಳೆದುಕೊಳ್ಳುತ್ತಾನೆ. ಅವನು ಕ್ರಿಯಾಶೀಲನಾಗಿದ್ದರೂ, ತನ್ನ ಕ್ರಿಯೆಗಳ ಅರ್ಥವನ್ನು ಕಳೆದುಕೊಳ್ಳುತ್ತಾನೆ. ಅವನು ಸಂಬಂಧಗಳನ್ನು ಹೊಂದಿದ್ದರೂ, ಆ ಸಂಬಂಧಗಳ ಆಂತರಿಕತೆಯನ್ನು ಅನುಭವಿಸುವುದಿಲ್ಲ. ಈ ಆಂತರಿಕ ಅಂತರವೇ ತನ್ನ ಮತ್ತು ತನ್ನ ಜೀವನದ ನಡುವಿನ ವಿಘಟಿತ ರೂಪ. ಅದುವೇ ಪರಕೀಯತೆಯ ಮೂಲಸ್ವರೂಪ.

ಈ ನೇಪಥ್ಯದಲ್ಲಿಯೇ ಪರಕೀಯತೆಯೆಂಬುದು ಕೇವಲ ತತ್ವಶಾಸ್ತ್ರೀಯ ಪದವಲ್ಲ, ಅದು ಮಾನವನ ಆತ್ಮಪರಿಚಯದ ಸಂಕೀರ್ಣ ಯಾತ್ರೆಯನ್ನು ಅರ್ಥಮಾಡಿಕೊಳ್ಳುವ ಪ್ರಮುಖ ಪರಿಕಲ್ಪನೆಯೆಂಬುದು ಸ್ಪಷ್ಟವಾಗುತ್ತದೆ. ಈ ಯಾತ್ರೆಯಲ್ಲಿ ವ್ಯಕ್ತಿ ತನ್ನನ್ನು ತಾನೇ ಪ್ರಶ್ನಿಸಿಕೊಳ್ಳಕಾಗುತ್ತದೆ: ತಾನು ಬದುಕುತ್ತಿರುವ ಜೀವನದ ಅರ್ಥವೇನು? ತನ್ನ ಅಸ್ತಿತ್ವದ ಕೇಂದ್ರವೇನು? ಈ ಪ್ರಶ್ನೆಗಳ ಸುತ್ತಲೇ ಪರಕೀಯತೆಯ ಚಿಂತನೆ ವಿಸ್ತರಿಸುತ್ತದೆ. ಹೀಗಾಗಿ ಪರಕೀಯತೆಯನ್ನು ಅರಿಯುವುದೆಂದರೆ, ಮಾನವನ ಅಸ್ತಿತ್ವದ ಮೂಲಭೂತ ಸಮಸ್ಯೆಗಳನ್ನು ಅರಿಯುವ ಮೊದಲ ಹೆಜ್ಜೆಯಾಗಿದೆ.

**ಮಾರ್ಕ್ಸ್‌ನ ಪರಕೀಯ ಪರಿಕಲ್ಪನೆ: ತನ್ನ ಶ್ರಮದಲ್ಲೇ ಅನ್ಯನಾಗುವ ಕಾರ್ಮಿಕ**

"The less you eat, drink, buy books, go to the theatre or to balls, or to the pub, and the less you think, love, theorize, sing, paint, fence, etc., the more you will be able to save and the greater will become your treasure which neither moth nor rust will corrupt–your capital. The less you are, the less you express your life, the more you have, the greater is your alienated life and the greater is the saving of your alienated being." (Karl Marx, Economic & Philosophic Manuscripts of 1844, p–XVI)

ಕಾರ್ಲ್ ಮಾರ್ಕ್ಸ್‌ನ ಪರಕೀಯತೆ ಪರಿಕಲ್ಪನೆ ಆಧುನಿಕ ಕೈಗಾರಿಕಾ ಸಮಾಜದ ಆಳವಾದ ವಿಮರ್ಶೆಯಾಗಿದೆ. 'ಎಕನಾಮಿಕ್ ಅಂಡ್ ಫಿಲಾಸಫಿಕ್ ಮ್ಯಾನುಸ್ಕ್ರಿಪ್ಟ್ ಆಫ್ 1844' ಕೃತಿಯಲ್ಲಿ ಆತನು ವಿವರಿಸುವಂತೆ, ಪರಕೀಯತೆ ಎಂದರೆ ವ್ಯಕ್ತಿಯು ತನ್ನದೇ ಶ್ರಮದಿಂದ, ತನ್ನ ಮಾನವೀಯ ಸ್ವಭಾವದಿಂದ ಮತ್ತು ತನ್ನ ಸಾಮಾಜಿಕ ಸಂಬಂಧಗಳಿಂದ ದೂರವಾಗುವ ಸ್ಥಿತಿ. ಅಲ್ಲಿ ಇದು ಕೇವಲ ಮಾನಸಿಕ ಅನುಭವವಲ್ಲ, ಬದಲಾಗಿ ಆರ್ಥಿಕ ವ್ಯವಸ್ಥೆಯೊಳಗೆ ನಿರ್ಮಿತವಾಗಿರುವ ರಚನಾತ್ಮಕ ಸಮಸ್ಯೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾರ್ಮಿಕನು ತನ್ನ ಕೆಲಸವನ್ನು ಸ್ವತಂತ್ರವಾಗಿ ಆಯ್ಕೆಮಾಡುವುದಿಲ್ಲ. ಅವನು ಬದುಕಿಗಾಗಿ ತನ್ನ ಶ್ರಮವನ್ನು ಮಾರುತ್ತಾನೆ. "The worker therefore only feels himself outside his work, and in his work feels outside himself. He feels at home when he is not working, and when he is working he does not feel at home." ಶ್ರಮವು

ವ್ಯಕ್ತಿಕರಣವಾಗದೇ, ಬಲವಂತದ ಕ್ರಿಯೆಯಾಗುತ್ತದೆ. ಶ್ರಮವು ಆನಂದದ ಮೂಲವಾಗದೆ, ಬದುಕಿನ ಭಾರವಾಗುತ್ತದೆ. ಮಾರ್ಕ್ಸ್ ಈ ಸ್ಥಿತಿಯನ್ನು ಪರಕೀಯ ಕಾರ್ಮಿಕ (Alienated Labour) ಎನ್ನುತ್ತಾನೆ.

ಇದನ್ನು ಮಾರ್ಕ್ಸ್ ನಾಲ್ಕು ಭಿನ್ನ ಆಯಾಮಗಳಲ್ಲಿ ವಿವರಿಸುತ್ತಾನೆ. ಮೊದಲನೆಯ ಆಯಾಮದಲ್ಲಿ, ಕಾರ್ಮಿಕನು ತನ್ನ ಉತ್ಪನ್ನದಿಂದ ದೂರವಾಗುತ್ತಾನೆ. ಅವನು ತಯಾರಿಸುವ ವಸ್ತು ಅವನದಾಗುವುದಿಲ್ಲ, ಅದು ಮಾರುಕಟ್ಟೆಗೆ ಸೇರಿಬಿಡುತ್ತದೆ. ಉದಾಹರಣೆಗೆ, ಒಂದು ಕಾರ್ಖಾನೆಯಲ್ಲಿ ಕೆಲಸ ಮಾಡುವ ವ್ಯಕ್ತಿ ಒಂದು ವಸ್ತುವನ್ನು ತಯಾರಿಸಿದರೂ, ಅದನ್ನು ಬಳಸುವ ಹಕ್ಕು ಅವನಿಗಿಲ್ಲ. ಈ ವಸ್ತು ಅವನಿಂದ ಬೇರ್ಪಟ್ಟ, ಅವನಿಗೆ 'ಅನ್ಯ'ವಾದ ಒಂದು ವಸ್ತುವಾಗುತ್ತದೆ. ಇಲ್ಲಿ ಶ್ರಮದ ಫಲವು ಕಾರ್ಮಿಕನ ವಿರುದ್ಧವೇ ನಿಲ್ಲುತ್ತದೆ. ಅದು ಅವನ ಶ್ರಮದ ಪ್ರತಿಫಲವಲ್ಲ, ಬದಲಾಗಿ ಅವನ ಅಸಹಾಯಕತೆಯ ಸಂಕೇತ. ಎರಡನೆಯ ಆಯಾಮದಲ್ಲಿ ಕಾರ್ಮಿಕನು ತನ್ನ ಶ್ರಮದ ಪ್ರಕ್ರಿಯೆಯಿಂದಲೇ ದೂರವಾಗುತ್ತಾನೆ. ಕೆಲಸವು ಅವನ ಸ್ವಾಭಾವಿಕ ಚಟುವಟಿಕೆಯಾಗದೇ, ಯಾಂತ್ರಿಕ ಮತ್ತು ಪುನರಾವರ್ತಿತ ಕ್ರಿಯೆಯಾಗುತ್ತದೆ. ಅವನು ಕೆಲಸ ಮಾಡುವಾಗ ತನ್ನನ್ನು ವ್ಯಕ್ತಪಡಿಸುವುದಿಲ್ಲ, ಬದಲಾಗಿ ತನ್ನನ್ನು ಕಳೆದುಕೊಳ್ಳುತ್ತಾನೆ. ಈ ಕಾರಣದಿಂದ ಕೆಲಸದ ಸಮಯದಲ್ಲಿ ಅವನು ತನ್ನನ್ನು 'ತಾನೇ ಅಲ್ಲ' ಎಂದು ಅನುಭವಿಸುತ್ತಾನೆ. ಕೆಲಸದಿಂದ ದೂರವಾದಾಗ ಮಾತ್ರ ಅವನು ತನ್ನನ್ನು 'ತಾನೇ' ಎಂದು ಅನುಭವಿಸುತ್ತಾನೆ. ಇದು ಪರಕೀಯತೆಯ ಅತ್ಯಂತ ವಿಚಿತ್ರ ಮತ್ತು ದುರಂತಮಯ ರೂಪ. ಮೂರನೆಯದರಲ್ಲಿ ಕಾರ್ಮಿಕನು ತನ್ನ ಮಾನವೀಯ ಸ್ವಭಾವದಿಂದ ದೂರವಾಗುತ್ತಾನೆ. ಮಾರ್ಕ್ಸ್‌ನ ಪ್ರಕಾರ ಮಾನವನ ವೈಶಿಷ್ಟ್ಯವೆಂದರೆ ಅವನ ಸೃಜನಶೀಲತೆ. ಅವನು ತನ್ನ ಚಿಂತನೆ ಮತ್ತು ಕಲ್ಪನೆಗಳನ್ನು ಶ್ರಮದ ಮೂಲಕ ರೂಪಿಸುತ್ತಾನೆ. ಆದರೆ ಯಾಂತ್ರಿಕ ಕೆಲಸದಲ್ಲಿ ಈ ಸೃಜನಶೀಲತೆ ನಿಷ್ಕ್ರಿಯವಾಗುತ್ತದೆ. ಕಾರ್ಮಿಕನು ಕೇವಲ ಹೊಟ್ಟೆಪಾಡಿಗಾಗಿ ಕೆಲಸ ಮಾಡುವ ಜೀವಿಯಾಗಿಬಿಡುತ್ತಾನೆ. ಅವನ ಮಾನವೀಯತೆ ಕುಗ್ಗುತ್ತದೆ. ಹೀಗಾಗಿ, ಅವನು ತನ್ನ ನೈಜ ಸ್ವರೂಪದಿಂದ ದೂರವಾಗುತ್ತಾನೆ. ಕೊನೆಯದರಲ್ಲಿ ಕಾರ್ಮಿಕನು ಇತರ ಮಾನವರಿಂದಲೂ ದೂರವಾಗುತ್ತಾನೆ. ಬಂಡವಾಳಶಾಹಿಯಲ್ಲಿ ಸಂಬಂಧಗಳು ಸಹ ಮಾನವೀಯವಾಗಿರದೇ, ಆರ್ಥಿಕ ವ್ಯವಹಾರಗಳಾಗಿ ಮಾರ್ಪಡುತ್ತವೆ. ಸಹಕಾರದ ಬದಲು ಸ್ಪರ್ಧೆ, ಸಹಾನುಭೂತಿಯ ಬದಲು ಲಾಭ– ಈ ಮೌಲ್ಯಗಳು ಮಾನವ ಸಂಬಂಧಗಳನ್ನು ನಿರ್ಧರಿಸುತ್ತವೆ. ಇದರಿಂದ ವ್ಯಕ್ತಿ ಇತರರನ್ನೂ 'ಅನ್ಯ'ರಂತೆ ಕಾಣಲು ಪ್ರಾರಂಭಿಸುತ್ತಾನೆ.

ಈ ನಾಲ್ಕು ಆಯಾಮಗಳನ್ನು ಒಟ್ಟಾಗಿ ನೋಡಿದರೆ, ಪರಕೀಯತೆ ಎಂಬುದು ಸಂಪೂರ್ಣ ಮಾನವ ಅಸ್ತಿತ್ವವನ್ನು ಆವರಿಸುವ ಸ್ಥಿತಿಯಾಗಿರುವುದು ಸ್ಪಷ್ಟವಾಗುತ್ತದೆ. ಕಾರ್ಮಿಕನು ತನ್ನ ಕೆಲಸದಲ್ಲಿ, ತನ್ನೊಳಗೆ ಮತ್ತು ತನ್ನ ಸಮಾಜದಲ್ಲಿ ಅನ್ಯನಾಗುತ್ತಾನೆ. ಅಂದರೆ ತನ್ನದೇ ನಿರ್ಮಿತ ಜಗತ್ತಿನಲ್ಲಿ ಅತಿಥಿಯಂತೆ ಬದುಕುತ್ತಾನೆ. ಮಾರ್ಕ್ಸ್‌ನ ದೃಷ್ಟಿಯಲ್ಲಿ ಈ ಪರಕೀಯತೆ ಅನಿವಾರ್ಯವಲ್ಲ. ಅದು ನಿರ್ದಿಷ್ಟ ಆರ್ಥಿಕ ವ್ಯವಸ್ಥೆಯ

ಪರಿಣಾಮ. ಹೀಗಾಗಿ ಸಮಾಜದಲ್ಲಿ ಸಮಾನತೆ ಮತ್ತು ಶ್ರಮದ ಸ್ವಾತಂತ್ರ್ಯ ಸ್ಥಾಪಿತವಾದಾಗ, ಮಾನವನು ತನ್ನ ಶ್ರಮವನ್ನು ಮತ್ತೆ ತನ್ನದೇ ವ್ಯಕ್ತಿಕರಣವಾಗಿ ಅನುಭವಿಸಬಹುದು. ಆಗ ಶ್ರಮವು ಕೇವಲ ಬದುಕಿನ ಸಾಧನವಾಗಿರದೆ, ಬದುಕಿನ ಅರ್ಥವಾಗುತ್ತದೆ. ಮಾರ್ಕ್ಸ್‌ನ ಈ ಪರಕೀಯತೆಯ ಪರಿಕಲ್ಪನೆ ನಮಗೆ ಒಂದು ಗಂಭೀರ ಸತ್ಯವನ್ನು ಮನವರಿಕೆ ಮಾಡುತ್ತದೆ. ಅದೆಂದರೆ, ಮಾನವನು ತನ್ನದೇ ಕೈಗಳಿಂದ ನಿರ್ಮಿಸಿದ ವ್ಯವಸ್ಥೆಯೊಳಗೆ ತನ್ನನ್ನು ಕಳೆದುಕೊಳ್ಳಬಹುದು. ಆದರೆ ಅದೇ ಸಮಯದಲ್ಲಿ, ಅವನಿಗೆ ತನ್ನ ಶ್ರಮವನ್ನು ಪುನಃಸ್ವಾಧೀನಗೊಳಿಸುವ ಶಕ್ತಿಯೂ ಇದೆ ಎಂಬುದು.

**ಅಸ್ತಿತ್ವವಾದದಲ್ಲಿ ಪರಕೀಯತೆ: ನನಗೆ ನಾನೇ ಅನ್ಯ**

ಅಸ್ತಿತ್ವವಾದದಲ್ಲಿ ಪರಕೀಯತೆ (Alienation as Self–Estrangement) ವಿಘಟಿತನಾಗುವ ಸ್ಥಿತಿ. ಅಂದರೆ ತನ್ನದೇ ಅನುಭವದಿಂದ, ತನ್ನ ಆಯ್ಕೆಗಳಿಂದ, ತನ್ನ ಭಾವನೆಗಳಿಂದ ದೂರವಾಗುವಿಕೆ. ಇಲ್ಲಿ ಪರಕೀಯತೆ ಹೊರಗಿನ ಸಮಾಜದಿಂದ ಮಾತ್ರ ಉಂಟಾಗುವುದಿಲ್ಲ, ಅದು ಮಾನವನ ಸ್ವಾತಂತ್ರ್ಯದ ಸ್ವಭಾವದಲ್ಲಿಯೇ ನೆಲೆಸಿದೆ. ಜೀನ್ ಪಾಲ್ ಸಾರ್ತ್ರೆಯ ಪ್ರಕಾರ ಮಾನವನಿಗೆ ಪೂರ್ವನಿರ್ಧರಿತ ಸ್ವಭಾವವಿಲ್ಲ. "Existence precedes essence." ಅಂದರೆ, ಮಾನವನು ಮೊದಲು ಇರುತ್ತಾನೆ, ನಂತರ ತನ್ನನ್ನು ತಾನೇ ರೂಪಿಸಿಕೊಳ್ಳುತ್ತಾನೆ. ಈ ರೂಪಿಸಿಕೊಳ್ಳುವ ಸ್ವಾತಂತ್ರ್ಯವೇ ಅವನಿಗೆ ಒಂದು ವರವಾಗಿದ್ದರೂ, ಅದೇ ಸಮಯದಲ್ಲಿ ಅದು ಭಾರವೂ ಆಗುತ್ತದೆ, ಏಕೆಂದರೆ ಪ್ರತಿಯೊಂದು ಆಯ್ಕೆಗೂ ಅವನದೇ ಹೊಣೆ. ಈ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ವ್ಯಕ್ತಿ ತನ್ನ ಸ್ವಾತಂತ್ರ್ಯವನ್ನು ನಿರಾಕರಿಸಲು ಪ್ರಾರಂಭಿಸುತ್ತಾನೆ. ಇದನ್ನೇ ಸಾರ್ತ್ರೆ 'Bad Faith' (ಸ್ವಯಂ ಮೋಸ) ಎಂದು ಕರೆಯುತ್ತಾನೆ. ಈ ಸ್ಥಿತಿಯಲ್ಲಿ ವ್ಯಕ್ತಿ ತನ್ನನ್ನು ತಾನೇ ವಸ್ತುವಿನಂತೆ ಕಾಣುತ್ತಾನೆ. ಉದಾಹರಣೆಗೆ, ಒಬ್ಬ ವ್ಯಕ್ತಿ 'ನಾನು ಹೀಗೇ ಇದ್ದೇನೆ, ನಾನು ಬದಲಾಗಲಾರೆ' ಎಂದು ಹೇಳುವಾಗ ಅವನು ತನ್ನ ಸ್ವಾತಂತ್ರ್ಯವನ್ನು ನಿರಾಕರಿಸುತ್ತಾನೆ. ಈ ನಿರಾಕರಣೆಯಲ್ಲೇ ಅವನು ತನ್ನ ನಿಜಸ್ವರೂಪದಿಂದ ದೂರವಾಗುತ್ತಾನೆ. ಹೀಗಾಗಿ ಅವನು ತನ್ನೊಳಗೇ ಅನ್ಯನಾಗುತ್ತಾನೆ. ಅವನ 'ನಾನು' ಮತ್ತು 'ನಾನು ಇರಬಹುದಾದ ಸಾಧ್ಯತೆ'ಗಳ ನಡುವೆ ಒಂದು ಅಂತರ ಏರ್ಪಡುತ್ತದೆ. ಸಾರ್ತ್ರೆಯ ಮತ್ತೊಂದು ಪ್ರಮುಖ ಪರಿಕಲ್ಪನೆ 'The Look' (Le Regard). ಇತರರ ದೃಷ್ಟಿ ನಮ್ಮನ್ನು ವಸ್ತುವಿನಂತೆ ರೂಪಿಸುತ್ತದೆ. ನಾವು ನಮ್ಮನ್ನು ನೋಡಿಕೊಳ್ಳುವುದಕ್ಕಿಂತ ಇತರರು ನಮ್ಮನ್ನು ಹೇಗೆ ಕಾಣುತ್ತಾರೆ ಎಂಬುದರ ಆಧಾರದ ಮೇಲೆ ನಮ್ಮ ಅಸ್ತಿತ್ವವನ್ನು ನಿರ್ಧರಿಸುತ್ತೇವೆ. ಈ ಸಂದರ್ಭದಲ್ಲಿ ನಾವು ನಮ್ಮನ್ನು 'ನಾವು' ಆಗಿರದೇ, 'ಇತರರಿಗೆ ಕಾಣುವ ರೂಪ'ವಾಗಿ ಅನುಭವಿಸುತ್ತೇವೆ. ಇದು ಆಂತರಿಕ ಪರಕೀಯತೆಯ ಮೂಲ. ಅಂದರೆ ನಾವು ನಮ್ಮದೇ ಕಣ್ಣಿನಿಂದ ನಮ್ಮನ್ನು ನೋಡದೇ, ಇತರರ ಕಣ್ಣುಗಳಿಂದ ನಮ್ಮನ್ನು ನೋಡಲು ಪ್ರಾರಂಭಿಸುತ್ತೇವೆ.

ಇದೇ ಬಗೆಯ ಪರಕೀಯತೆಯ ಮತ್ತೊಂದು ಆಯಾಮವನ್ನು ಅಲ್ಬರ್ಟ್ ಕಾಮೂನ ತತ್ವದಲ್ಲಿ ಕಾಣಬಹುದು. ಕಾಮೂ ತನ್ನ 'ಅಸಂಗತ' (Absurd) ಪರಿಕಲ್ಪನೆಯಲ್ಲಿ, ಮಾನವನು ಅರ್ಥವನ್ನು ಹುಡುಕುವ ಜೀವಿಯಾಗಿದ್ದರೂ ಜಗತ್ತು ಅರ್ಥವಿಲ್ಲದದ್ದು ಎಂದು ಹೇಳುತ್ತಾನೆ. ಈ ಅಸಂಗತತೆಯ ಅರಿವು ವ್ಯಕ್ತಿಯನ್ನು ತನ್ನ ಜೀವನದ ಅರ್ಥದಿಂದ ದೂರ ಮಾಡುತ್ತದೆ. ಅವನು ಬದುಕುತ್ತಿದ್ದರೂ, ತನ್ನ ಬದುಕಿನೊಂದಿಗೆ ಆಳವಾದ ಸಂಬಂಧವನ್ನು ಅನುಭವಿಸುವುದಿಲ್ಲ. ಈ ತತ್ವದ ಜೀವಂತ ರೂಪಕವೇ ದಿ ಸ್ಟ್ರೇಂಜರ್ ಕಾದಂಬರಿಯ ನಾಯಕ. ಅವನು ತನ್ನ ತಾಯಿಯ ಮರಣದ ಸಂದರ್ಭದಲ್ಲಿಯೂ ಸಹ 'ಸಾಮಾನ್ಯ' ದುಃಖವನ್ನು ವ್ಯಕ್ತಪಡಿಸುವುದಿಲ್ಲ. ಅವನು ದುಃಖಿಸಬೇಕಾದಾಗ ದುಃಖಿಸುವುದಿಲ್ಲ, ಸಂಭ್ರಮಿಸಬೇಕಾದಾಗ ಸಂಭ್ರಮಿಸುವುದಿಲ್ಲ. ಸಮಾಜವು ನಿರೀಕ್ಷಿಸುವ ಭಾವನಾತ್ಮಕ ಪ್ರತಿಕ್ರಿಯೆಗಳನ್ನು ಅವನು ಹೊರಹಾಕುವುದಿಲ್ಲ. ಆದರೆ ಇಲ್ಲಿ ಮುಖ್ಯವಾದುದು– ಅವನು ಕೇವಲ ಸಮಾಜಕ್ಕೆ ಅನ್ಯನಲ್ಲ, ಅವನು ತನ್ನ ಭಾವನೆಗಳಿಗೂ ಅನ್ಯ. ಅವನು ತನ್ನೊಳಗಿನ ಭಾವನೆಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದಿಲ್ಲ, ಅವುಗಳಿಗೆ ಅರ್ಥ ನೀಡಲು ಕೂಡ ಪ್ರಯತ್ನಿಸುವುದಿಲ್ಲ. ಅವನು ಕೇವಲ ಘಟನೆಗಳನ್ನು ಅನುಭವಿಸುತ್ತಾನೆ, ಆದರೆ ಅವುಗಳೊಂದಿಗೆ ಯಾವುದೇ ಆಂತರಿಕ ಸಂಬಂಧ ಹೊಂದುವುದಿಲ್ಲ. ಈ ಸ್ಥಿತಿಯೇ ಭಾವನಾತ್ಮಕ ಪರಕೀಯತೆ. ಈ ಭಾವನಾತ್ಮಕ ಪರಕೀಯತೆ ಅಸ್ತಿತ್ವವಾದದ ಪ್ರಮುಖ ಲಕ್ಷಣವಾಗಿದೆ. ವ್ಯಕ್ತಿ ತನ್ನ ಭಾವನೆಗಳನ್ನು ತಾನು ಅನುಭವಿಸುವ ಬದಲು, ಅವುಗಳನ್ನು ಹೊರಗಿನ ಘಟನೆಗಳಂತೆ ನೋಡುತ್ತಾನೆ. ಹೀಗಾಗಿ, ಅವನೊಳಗಿನ 'ಅನುಭವಿಸುವ ನಾನು' ಮತ್ತು 'ಅನುಭವಿಸಲ್ಪಡುವ ಘಟನೆ'ಗಳ ನಡುವೆ ಅಂತರ ಉಂಟಾಗುತ್ತದೆ. ಅಸ್ತಿತ್ವವಾದದ ದೃಷ್ಟಿಯಲ್ಲಿ ಈ ಪರಕೀಯತೆ ಒಂದು ದುರಂತ ಮಾತ್ರವಲ್ಲ, ಅದು ಒಂದು ಅರಿವು. ವ್ಯಕ್ತಿ ತನ್ನ ಈ ವಿಘಟನೆಯನ್ನು ಅರಿತಾಗ, ಅವನು ತನ್ನ ಜೀವನದ ಹೊಣೆಗಾರಿಕೆಯನ್ನು ಸ್ವೀಕರಿಸಲು ಪ್ರಾರಂಭಿಸುತ್ತಾನೆ. ಈ ಸ್ವೀಕಾರವೇ 'Authentic Existence'ಗೆ ದಾರಿ. ಅಂದರೆ ಪರಕೀಯತೆಯನ್ನು ಅರಿತುಕೊಳ್ಳುವ, ಅದನ್ನು ಮೀರುವ ಮೊದಲ ಹೆಜ್ಜೆ.

ಹೆನ್ರಿಕ್ ಇಬ್ಸೆನ್‌ನ 'ಎ ಡಾಲ್ಸ್ ಹೌಸ್' ನಾಟಕದಲ್ಲಿ ನೋರಾ ಹೆಲ್ಮರ್ ಎಂಬ ಪಾತ್ರವು Authentic Existence ಎಂಬ ಪರಿಕಲ್ಪನೆಯನ್ನು ಸ್ಪಷ್ಟವಾಗಿ ಪ್ರತಿನಿಧಿಸುತ್ತದೆ. ಆರಂಭದಲ್ಲಿ ನೋರಾ ತನ್ನ ಜೀವನವನ್ನು ಒಳ್ಳೆಯ ಹೆಂಡತಿ ಮತ್ತು ಒಳ್ಳೆಯ ತಾಯಿ ಎಂಬ ಸಮಾಜದ ನಿರೀಕ್ಷೆಗಳ ಪ್ರಕಾರ ನಡೆಸುತ್ತಾಳೆ. ಅವಳು ತನ್ನ ಪತಿ ಮತ್ತು ಕುಟುಂಬದ ದೃಷ್ಟಿಯಲ್ಲಿ ಸ್ವತಂತ್ರ ವ್ಯಕ್ತಿಯಾಗಿರದೆ, ಅವರ ಆಸೆಗಳಿಗೆ ಹೊಂದಿಕೊಳ್ಳುವ ಗೊಂಬೆಯಂತೆ ಬದುಕುತ್ತಾಳೆ. ಈ ಸ್ಥಿತಿಯಲ್ಲಿ ಅವಳ ಜೀವನವು ಹೊರಗೆ ಸಮರ್ಪಕವಾಗಿ ಕಾಣಿಸಿದರೂ, ಆಂತರಿಕವಾಗಿ ಅದು ಅಪ್ರಾಮಾಣಿಕವಾಗಿರುತ್ತದೆ, ಏಕೆಂದರೆ ಅವಳು ತನ್ನ ನಿಜವಾದ ಸ್ವರೂಪವನ್ನು ಅರಿತು ಬದುಕುತ್ತಿಲ್ಲ. ಆದರೆ ಅಂತ್ಯದಲ್ಲಿ ನೋರಾ ತನ್ನ ಜೀವನದ ಬಗ್ಗೆ ಗಾಢವಾದ ಆತ್ಮಜ್ಞಾನವನ್ನು ಪಡೆಯುತ್ತಾಳೆ. ಅವಳು ತನ್ನನ್ನು ತಾನು ಅರಿತುಕೊಳ್ಳದೆ, ಇತರರ ನಿರೀಕ್ಷೆಗಳ ಪ್ರಕಾರ ಬದುಕಿರುವುದನ್ನು

ಗ್ರಹಿಸುತ್ತಾಳೆ. ಈ ಅರಿವು ಅವಳನ್ನು ಒಂದು ಮಹತ್ವದ ನಿರ್ಧಾರಕ್ಕೆ ತರುತ್ತದೆ: ತನ್ನ ಪತಿ, ಕುಟುಂಬ ಮತ್ತು ಸಮಾಜದ ನಿರ್ಬಂಧಗಳನ್ನು ಬಿಟ್ಟು, ತನ್ನನ್ನು ತಾನೇ ಅರಿಯುವ ಯಾತ್ರೆಯನ್ನು ಪ್ರಾರಂಭಿಸುವುದು. ಈ ನಿರ್ಧಾರವು ಸುಲಭವಲ್ಲ, ಅದು ಅನಿಶ್ಚಿತತೆ, ಭಯ ಮತ್ತು ಸಾಮಾಜಿಕ ವಿರೋಧವನ್ನು ಒಳಗೊಂಡಿದೆ. ಆದರೂ, ಅವಳು ತನ್ನ ಸ್ವಾತಂತ್ರ್ಯವನ್ನು ಆಯ್ಕೆಮಾಡುತ್ತಾಳೆ ಮತ್ತು ತನ್ನ ಜೀವನದ ಹೊಣೆಗಾರಿಕೆಯನ್ನು ಸ್ವೀಕರಿಸುತ್ತಾಳೆ. ಈ ಕ್ಷಣದಲ್ಲಿ ನೋರಾ ಅಪ್ರಾಮಾಣಿಕ ಜೀವನದಿಂದ ಪ್ರಾಮಾಣಿಕ ಅಸ್ತಿತ್ವದತ್ತ ಹೆಜ್ಜೆಯಿಡುತ್ತಾಳೆ. ಅವಳು ಇತರರ ದೃಷ್ಟಿಯಲ್ಲಿ ಬದುಕುವುದನ್ನು ತಳ್ಳಿಹಾಕಿ, ತನ್ನೊಳಗಿನ ಸತ್ಯಕ್ಕೆ ನಿಷ್ಠೆಯಿಂದ ಬದುಕಲು ನಿರ್ಧರಿಸುತ್ತಾಳೆ. ಹೀಗಾಗಿ ನೋರಾ ಪಾತ್ರವು Authentic Existence ಎಂದರೆ ಏನು ಎಂಬುದನ್ನು ತಾತ್ವಿಕವಾಗಿ ಮಾತ್ರವಲ್ಲ, ಜೀವಂತ ಅನುಭವವಾಗಿ ತೋರಿಸುತ್ತದೆ. ಸ್ವಾತಂತ್ರ್ಯವನ್ನು ಅರಿತು, ತನ್ನ ಜೀವನವನ್ನು ತನ್ನದೇ ಆಯ್ಕೆಯ ಮೂಲಕ ರೂಪಿಸಿಕೊಳ್ಳುವುದು ಮತ್ತು ಅದರ ಹೊಣೆಗಾರಿಕೆಯನ್ನು ಸ್ವೀಕರಿಸುವುದು– ಅದೇ ಪ್ರಾಮಾಣಿಕ ಅಸ್ತಿತ್ವ. ಅಂತಿಮವಾಗಿ, ಅಸ್ತಿತ್ವವಾದದಲ್ಲಿ ಪರಕೀಯತೆ ನಮಗೆ ಒಂದು ಮಹತ್ತರ ಪ್ರಶ್ನೆಯನ್ನು ಎದುರಿಗಿಡುತ್ತದೆ. ಅದೆಂದರೆ 'ನಾನು ನನ್ನ ಜೀವನವನ್ನು ನಿಜವಾಗಿ ಅನುಭವಿಸುತ್ತಿದ್ದೇನಾ ಅಥವಾ ನಾನು ನನ್ನದೇ ಅನುಭವಗಳಲ್ಲೇ ಅನ್ಯನಾಗಿ ಉಳಿದಿದ್ದೇನಾ?' ಈ ಪ್ರಶ್ನೆಯೇ ಮಾನವನ ಅಸ್ತಿತ್ವದ ಆಳವಾದ ಚಿಂತನೆಯ ಆರಂಭಬಿಂದು.

**ಸಾಮಾಜಿಕ ಪರಕೀಯತೆ: ಮೌಲ್ಯಗಳಿಂದ ದೂರವಾಗುವ ಜೀವನ**

ಸಾಮಾಜಿಕ ಪರಕೀಯತೆಯು ವ್ಯಕ್ತಿಯು ತನ್ನ ಸಮಾಜದ ಮೌಲ್ಯಗಳು, ನಿಯಮಗಳು ಮತ್ತು ಸಂಬಂಧಗಳಿಂದ ದೂರವಾಗುವ ಸ್ಥಿತಿ. ಇದು ಕೇವಲ ವೈಯಕ್ತಿಕ ಸಮಸ್ಯೆಯಲ್ಲ, ಬದಲಾಗಿ ಸಮಾಜದ ರಚನೆ, ಬದಲಾವಣೆಗಳು ಮತ್ತು ಅದರ ನಿಯಂತ್ರಣ ವ್ಯವಸ್ಥೆಗಳ ಪರಿಣಾಮ. ಆಧುನಿಕ ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಈ ವಿಚಾರವನ್ನು ಆಳವಾಗಿ ವಿಶ್ಲೇಷಿಸಿದವರಲ್ಲಿ ಎಮಿಲ್ ಡರ್ಕಿಮ್ ಮತ್ತು ಮ್ಯಾಕ್ಸ್ ವೆಬರ್ ಪ್ರಮುಖರು.

ಇದಕ್ಕೆ ಪೂರಕವಾಗಿ ಡರ್ಕಿಮ್‌ನ 'ಅನೋಮಿ' ಪರಿಕಲ್ಪನೆಯನ್ನು ನೋಡಬಹುದು. 'ಅನೋಮಿ' ಗ್ರೀಕ್ ಪದ. ಅನೋಮಿ ಎಂದರೆ 'ನಿಯಮಶೂನ್ಯತೆ' ಅಥವಾ 'ಮೌಲ್ಯಗಳ ಕುಸಿತ.' ಸಮಾಜವು ವ್ಯಕ್ತಿಯ ಜೀವನವನ್ನು ಮಾರ್ಗದರ್ಶಿಸುವ ಮೌಲ್ಯಗಳು ಮತ್ತು ನಿಯಮಗಳನ್ನು ಒದಗಿಸುತ್ತದೆ. ಆದರೆ ಆಧುನಿಕತೆಯಲ್ಲಿ ವಿಶೇಷವಾಗಿ ವೇಗದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳ ಸಂದರ್ಭದಲ್ಲಿ ಈ ಮೌಲ್ಯಗಳು ದುರ್ಬಲವಾಗುತ್ತವೆ ಅಥವಾ ಅಸ್ಪಷ್ಟವಾಗುತ್ತವೆ. ಈ ಸಂದರ್ಭದಲ್ಲಿ ವ್ಯಕ್ತಿಗೆ ಯಾವುದು ಸರಿಯಾದುದು, ಯಾವುದು ತಪ್ಪು ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲದಂತಾಗುತ್ತದೆ. ಡರ್ಕಿಮ್‌ನ ದೃಷ್ಟಿಯಲ್ಲಿ ಈ ಅನಿಶ್ಚಿತತೆ ವ್ಯಕ್ತಿಯನ್ನು ದಿಕ್ಕುತೋಚದ ಸ್ಥಿತಿಗೆ ತಳ್ಳುತ್ತದೆ. ಅವನು ತನ್ನ ಜೀವನದ ಉದ್ದೇಶವನ್ನು

ಕಂಡುಕೊಳ್ಳಲಾರನು. ಅವನ ಆಸೆಗಳು ಅಸೀಮವಾಗುತ್ತವೆ, ಆದರೆ ಅವುಗಳನ್ನು ನಿಯಂತ್ರಿಸುವ ಮೌಲ್ಯಗಳು ಇರುವುದಿಲ್ಲ. ಈ ಸ್ಥಿತಿಯೇ ಸಾಮಾಜಿಕ ಪರಕೀಯತೆ. ವ್ಯಕ್ತಿ ಸಮಾಜದ ಭಾಗವಾಗಿದ್ದರೂ, ಅವನು ಅದರೊಂದಿಗೆ ಆಂತರಿಕ ಸಂಬಂಧ ಹೊಂದುವುದಿಲ್ಲ. ಅವನು ಸಮಾಜದಲ್ಲಿದ್ದರೂ, ಸಮಾಜಕ್ಕೆ ಸೇರಿದವನಾಗಿರುವುದಿಲ್ಲ. ಇದಕ್ಕೆ ಉದಾಹರಣೆಯಾಗಿ ಡರ್ಕಿಮ್ ಆತ್ಮಹತ್ಯೆಯ ಅಧ್ಯಯನವನ್ನು ನೀಡುತ್ತಾನೆ. ಅನೋಮಿ ಹೆಚ್ಚಾದ ಸಮಾಜಗಳಲ್ಲಿ, ಆತ್ಮಹತ್ಯೆಯ ಪ್ರಮಾಣವೂ ಹೆಚ್ಚಾಗುತ್ತದೆ ಎಂದು ಅವನು ಸೂಚಿಸುತ್ತಾನೆ. ಇದು ವ್ಯಕ್ತಿಯು ತನ್ನ ಜೀವನದ ಅರ್ಥವನ್ನು ಕಳೆದುಕೊಂಡಿರುವುದನ್ನು ಸೂಚಿಸುತ್ತದೆ, ಅಂದರೆ, ಮೌಲ್ಯಗಳಿಂದ ದೂರವಾಗಿರುವ ಪರಕೀಯತೆ.

ಇದನ್ನು ಇನ್ನಷ್ಟು ಸೂಕ್ಷ್ಮವಾಗಿ ಮತ್ತು ರಚನಾತ್ಮಕವಾಗಿ ವಿವರಿಸುವುದು ವೆಬರ್‌ನ 'Iron Cage' ತತ್ವ. ವೆಬರ್‌ನ ಪ್ರಕಾರ ಆಧುನಿಕ ಸಮಾಜವು ಬುದ್ಧಿವಾದೀಕರಣ ಪ್ರಕ್ರಿಯೆಯ ಮೂಲಕ ರೂಪುಗೊಳ್ಳುತ್ತದೆ. ಎಲ್ಲವೂ ನಿಯಮಗಳು, ಗಣನೆಗಳು ಮತ್ತು ಕಾರ್ಯಕ್ಷಮತೆ ಆಧಾರಿತವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಮಾನವೀಯ ಮೌಲ್ಯಗಳು– ಭಾವನೆ, ಸೃಜನಶೀಲತೆ, ಸ್ವಾತಂತ್ರ್ಯ ಕ್ರಮೇಣ ಕಡಿಮೆಯಾಗುತ್ತವೆ. 'Iron Cage' ಎಂದರೆ ನಿಯಮಗಳು ಮತ್ತು ವ್ಯವಸ್ಥೆಗಳು ವ್ಯಕ್ತಿಯನ್ನು ಬಂಧಿಸುವ ಸ್ಥಿತಿ. ವ್ಯಕ್ತಿ ತನ್ನ ಜೀವನವನ್ನು ಸ್ವತಂತ್ರವಾಗಿ ನಡೆಸುವುದಿಲ್ಲ, ವ್ಯವಸ್ಥೆಯ ನಿಯಮಗಳ ಪ್ರಕಾರ ಬದುಕುತ್ತಾನೆ. ಅವನ ಕೆಲಸ, ಅವನ ಜೀವನಶೈಲಿ, ಅವನ ನಿರ್ಧಾರಗಳೆಲ್ಲವೂ ಬಾಹ್ಯ ವ್ಯವಸ್ಥೆಗಳಿಗನುಸಾರವಾಗಿ ನಡೆಯುತ್ತವೆ. ಈ ಸಂದರ್ಭದಲ್ಲಿ ವ್ಯಕ್ತಿ ಬದುಕುತ್ತಾನೆ, ಆದರೆ ಅವನಿಗೆ ತನ್ನ ಜೀವನದ ಮೇಲೆ ನಿಯಂತ್ರಣವಿಲ್ಲ. ಅವನು ನಿಯಮಗಳನ್ನು ಅನುಸರಿಸುತ್ತಾನೆ, ಆದರೆ ಅವುಗಳ ಅರ್ಥವನ್ನು ಅನುಭವಿಸುವುದಿಲ್ಲ. ಅವನು ಯಶಸ್ಸನ್ನು ಸಾಧಿಸುತ್ತಾನೆ, ಆದರೆ ಸಂತೃಪ್ತಿಯನ್ನು ಕಂಡುಕೊಳ್ಳಲಾರನು. ಇದು ಆಧುನಿಕ ಮಾನವನ ದುರಂತ: ಮೇಲ್ನೋಟಕ್ಕೆ ವ್ಯವಸ್ಥಿತ ಜೀವನ, ಆದರೆ ಆಂತರಿಕವಾಗಿ ಖಾಲಿತನ.

ಡರ್ಕಿಮ್ ಮತ್ತು ವೆಬರ್ ಇಬ್ಬರೂ ಹೇಳುವುದೇನೆಂದರೆ ಸಾಮಾಜಿಕ ಪರಕೀಯತೆ ಕೇವಲ ವ್ಯಕ್ತಿಯ ಸಮಸ್ಯೆಯಲ್ಲ. ಅದು ಸಾಮಾಜಿಕ ಸ್ವರೂಪದ ಸಮಸ್ಯೆ. ಒಂದೆಡೆ ಮೌಲ್ಯಗಳ ಕುಸಿತ, ಇನ್ನೊಂದೆಡೆ ನಿಯಮಗಳ ಅತಿಯಾದ ನಿಯಂತ್ರಣ. ಈ ಎರಡೂ ವ್ಯಕ್ತಿಯನ್ನು ಅವನ ಜೀವನದಿಂದ ದೂರ ಮಾಡುತ್ತವೆ. ಅಂತಿಮವಾಗಿ, ಸಾಮಾಜಿಕ ಪರಕೀಯತೆ ಪ್ರಮುಖ ಪ್ರಶ್ನೆಯೊಂದನ್ನು ಹುಟ್ಟುಹಾಕುತ್ತದೆ. ಅದೇನೆಂದರೆ 'ನಾನು ಸಮಾಜದ ನಿಯಮಗಳನ್ನು ಅನುಸರಿಸುತ್ತಿದ್ದೇನಾ, ಅಥವಾ ಸಮಾಜವೇ ನನ್ನನ್ನು ನಿಯಂತ್ರಿಸುತ್ತಿದೆಯಾ?' ಈ ಪ್ರಶ್ನೆಗೆ ಉತ್ತರ ಹುಡುಕುವುದು, ಆಧುನಿಕ ಸಮಾಜದಲ್ಲಿ ಅರ್ಥಪೂರ್ಣ ಜೀವನವನ್ನು ಕಂಡುಕೊಳ್ಳುವ ಮೊದಲ ಹೆಜ್ಜೆ.

ಫ್ರಾಂಜ್ ಕಾಫ್ಕಾನ ದಿ ಟ್ರಯಲ್ ಕಾದಂಬರಿಯಲ್ಲಿ ಜೋಸೆಫ್ ಕೆ. ಎಂಬ ಪಾತ್ರದ ಮೂಲಕ ಸಾಮಾಜಿಕ ಪರಕೀಯತೆಯನ್ನು ಮತ್ತಷ್ಟು ಸ್ಪಷ್ಟವಾಗಿ

ವಿವರಿಸಬಹುದು. ಯಾವುದೇ ಸ್ಪಷ್ಟ ಕಾರಣವಿಲ್ಲದೆ ಬಂಧನಕ್ಕೊಳಗಾಗುವ ಜೋಸೆಫ್ ಕೆ., ತನ್ನ ಮೇಲೆ ನಡೆಯುತ್ತಿರುವ ನ್ಯಾಯಪ್ರಕ್ರಿಯೆಯ ಅರ್ಥವನ್ನು ತಿಳಿಯಲು ಪ್ರಯತ್ನಿಸುತ್ತಾನೆ. ಆದರೆ ಅವನಿಗೆ ಎದುರಾಗುವ ವ್ಯವಸ್ಥೆ ಸಂಕೀರ್ಣ, ಅಸ್ಪಷ್ಟ ಮತ್ತು ಅಪ್ರವೇಶನೀಯವಾಗಿದೆ. ಅವನು ನಿಯಮಗಳನ್ನು ಪಾಲಿಸಲು ಯತ್ನಿಸಿದರೂ, ಆ ನಿಯಮಗಳ ಸ್ವರೂಪ ಮತ್ತು ಉದ್ದೇಶ ಅವನಿಗೆ ತಿಳಿಯುವುದಿಲ್ಲ. ಈ ಅಸ್ಪಷ್ಟತೆಯ ಮಧ್ಯೆ ಅವನು ಕ್ರಮೇಣ ತನ್ನದೇ ಸಮಾಜದಲ್ಲಿ ಅನ್ಯನಾಗುತ್ತಾನೆ. ಈ ಸ್ಥಿತಿಯಲ್ಲಿ ಜೋಸೆಫ್‌ನ ಜೀವನವು ಮ್ಯಾಕ್ಸ್ ವೆಬರ್ ವಿವರಿಸಿದ 'Iron Cage' ಪರಿಕಲ್ಪನೆಯನ್ನು ನೆನಪಿಸುತ್ತದೆ. ವ್ಯವಸ್ಥೆಯ ನಿಯಮಗಳು ವ್ಯಕ್ತಿಯ ಮೇಲೆ ಆಧಿಪತ್ಯ ಸಾಧಿಸುತ್ತವೆ. ವ್ಯಕ್ತಿ ತನ್ನ ಜೀವನವನ್ನು ಸ್ವತಂತ್ರವಾಗಿ ನಿರ್ಧರಿಸುವುದಿಲ್ಲ, ಬದಲಾಗಿ ನಿಯಮಗಳೊಳಗೆ ಬಂಧಿಯಾಗುತ್ತಾನೆ. ಅವನು ಕ್ರಿಯಾಶೀಲನಾಗಿದ್ದರೂ, ತನ್ನ ಕ್ರಿಯೆಗಳ ಅರ್ಥವನ್ನು ಗ್ರಹಿಸಲು ಅಸಮರ್ಥನಾಗುತ್ತಾನೆ. ಇದೇ ಸಂದರ್ಭದಲ್ಲಿ, ಕಾದಂಬರಿಯಲ್ಲಿ ಕಾಣಿಸುವ ನಿಯಮಗಳ ಅಸ್ಪಷ್ಟತೆ ಮತ್ತು ನ್ಯಾಯದ ಅರ್ಥದ ಕೊರತೆ ಡರ್ಕಿಮ್ ಹೇಳುವ 'Anomie'ಯ ಲಕ್ಷಣಗಳನ್ನು ಪ್ರತಿಬಿಂಬಿಸುತ್ತದೆ. ಮೌಲ್ಯಗಳು ಮತ್ತು ನಿಯಮಗಳು ಇದ್ದರೂ, ಅವು ಸ್ಪಷ್ಟ ಮಾರ್ಗದರ್ಶನ ನೀಡುವುದಿಲ್ಲ. ಹೀಗಾಗಿ ಜೋಸೆಫ್ ಪಾತ್ರದ ಅನುಭವವು ವ್ಯಕ್ತಿಯು ಸಮಾಜದೊಳಗೆ ಬದುಕುತ್ತಿದ್ದರೂ, ಅದರ ಅರ್ಥ ಮತ್ತು ತನ್ನ ಸ್ಥಾನವನ್ನು ಕಳೆದುಕೊಳ್ಳುವ ಸ್ಥಿತಿಯನ್ನು ತೋರಿಸುತ್ತದೆ. ವ್ಯವಸ್ಥೆಯ ನಿಯಂತ್ರಣ ಮತ್ತು ಮೌಲ್ಯಗಳ ಅಸ್ಪಷ್ಟತೆ ಎರಡೂ ಸೇರಿ ಅವನನ್ನು ತನ್ನದೇ ಬದುಕಿನಲ್ಲಿ ಅನ್ಯನನ್ನಾಗಿ ಮಾಡುತ್ತವೆ. ಈ ಮೂಲಕ, ದಿ ಟ್ರಯಲ್ ಕಾದಂಬರಿ ಸಾಮಾಜಿಕ ಪರಕೀಯತೆಯ ಗಾಢ ಅನುಭವವನ್ನು ಜೀವಂತವಾಗಿ ರೂಪಿಸುತ್ತದೆ. ವ್ಯಕ್ತಿಯು ಸಮಾಜದ ಭಾಗವಾಗಿದ್ದರೂ, ಅದರೊಂದಿಗೆ ಆಂತರಿಕ ಸಂಪರ್ಕ ಕಳೆದುಕೊಂಡಿರುವ ಸ್ಥಿತಿ ನಿರ್ಮಾಣವಾಗುತ್ತದೆ.

**ಸಾಹಿತ್ಯದಲ್ಲಿ ಪರಕೀಯತೆ: ಅನುಭವದ ಜೀವಂತ ರೂಪ**

ಸಾಹಿತ್ಯವು ಪರಕೀಯತೆಯನ್ನು ಕೇವಲ ಸಿದ್ಧಾಂತದ ಮಟ್ಟದಲ್ಲಿ ಮಾತ್ರವಲ್ಲ, ಜೀವಂತ ಮಾನವ ಅನುಭವವಾಗಿ ಚಿತ್ರಿಸುತ್ತದೆ. ತತ್ವಶಾಸ್ತ್ರವು ಅದನ್ನು ವ್ಯಾಖ್ಯಾನಿಸಿದರೆ, ಸಾಹಿತ್ಯವು ಅದನ್ನು ಅನುಭವಿಸುತ್ತದೆ. ಪಾಶ್ಚಾತ್ಯ ಆಧುನಿಕ ಸಾಹಿತ್ಯದಲ್ಲಿ ಪರಕೀಯತೆ ವ್ಯಕ್ತಿಯ ದೇಹ, ಮನಸ್ಸು, ಸಮಾಜ ಮತ್ತು ಕಾಲ– ಈ ಎಲ್ಲ ಆಯಾಮಗಳಲ್ಲಿ ವ್ಯಕ್ತವಾಗುತ್ತದೆ. ಫ್ರಾಂಜ್ ಕಾಫ್ಕಾನ ಮೆಟಮಾರ್ಫೋಸಿಸ್ ಅನ್ನು ಗಮನಿಸಿದರೆ, ಗ್ರೆಗರ್ ಸಾಮ್ಸಾ ಒಂದು ಬೆಳಿಗ್ಗೆ ಎಚ್ಚರವಾದಾಗ ಕೀಟವಾಗಿ ರೂಪಾಂತರಗೊಂಡಿರುವುದು ಕೇವಲ ವಿಚಿತ್ರ ಘಟನೆಯಲ್ಲ. ಅದು ಆಳವಾದ ಪರಕೀಯತೆಯ ರೂಪಕ. ಗ್ರೆಗರ್ ತನ್ನದೇ ದೇಹದಲ್ಲೇ ಅನ್ಯನಾಗುತ್ತಾನೆ. ಅವನಿಗೆ ತನ್ನ ದೇಹವನ್ನು ನಿಯಂತ್ರಿಸಲು ಸಾಧ್ಯವಾಗುವುದಿಲ್ಲ. ಅದು ಅವನಿಗೆ ತನ್ನದಲ್ಲದ ವಸ್ತುವಿನಂತೆ ಕಾಣುತ್ತದೆ. ಈ ದೈಹಿಕ ಪರಕೀಯತೆ ತಕ್ಷಣವೇ ಮಾನಸಿಕ ಮತ್ತು ಸಾಮಾಜಿಕ ಮಟ್ಟಗಳಿಗೂ ವಿಸ್ತರಿಸುತ್ತದೆ. ಅವನ ಕುಟುಂಬ ಮೊದಲು ಅವನ ಮೇಲೆ ಅವಲಂಬಿತವಾಗಿದ್ದರೂ, ಈಗ ಅವನನ್ನು ಭಾರವಾಗಿ ಕಾಣಲು ಪ್ರಾರಂಭಿಸುತ್ತದೆ. ಅವನೊಂದಿಗೆ ಸಂವಹನ

ಕಡಿಮೆಯಾಗುತ್ತದೆ. ಅವನ ಅಸ್ತಿತ್ವವೇ ಅವರಿಗೆ ಅಸಹ್ಯವಾಗುತ್ತದೆ. ಹೀಗಾಗಿ, ಗ್ರೆಗರ್ ತನ್ನದೇ ಮನೆಯಲ್ಲೇ ಅತಿಥಿಯಂತೆ ಬದುಕುತ್ತಾನೆ. ಇಲ್ಲಿ ಪರಕೀಯತೆ ಮೂರು ರೂಪಗಳಲ್ಲಿ ವ್ಯಕ್ತವಾಗುತ್ತದೆ: 1. ದೇಹದ ರೂಪ– ತನ್ನದೇ ಶರೀರಕ್ಕೆ ಅನ್ಯ. 2. ಮನಸ್ಸಿನ ರೂಪ– ತನ್ನ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲಾರದು. 3. ಸಾಮಾಜಿಕ ರೂಪ– ಕುಟುಂಬದಿಂದ ತಳ್ಳಿಹಾಕಲ್ಪಡುವುದು. ಕಾಫ್ಕಾ ಈ ಕಥೆಯ ಮೂಲಕ ಅವನು ಬದುಕಿದ್ದರೂ, ಅವನ ಅಸ್ತಿತ್ವವನ್ನು ಯಾರೂ ಗುರುತಿಸುವುದಿಲ್ಲ ಎನ್ನುವ ಆಧುನಿಕ ಮಾನವನ ದುರಂತವನ್ನು ತೋರಿಸುತ್ತಾನೆ.

ಇದೇ ಪರಕೀಯತೆಯ ಮತ್ತೊಂದು ರೂಪವನ್ನು ಟಿ.ಎಸ್.ಎಲಿಯಟ್‌ನ ದಿ ವೇಸ್ಟ್ ಲ್ಯಾಂಡ್‌ನಲ್ಲಿ ಕಾಣಬಹುದು. ಇಲ್ಲಿ ನಗರ ಜೀವನವು ಭೌತಿಕವಾಗಿ ಜನರಿಂದ ತುಂಬಿದ್ದರೂ, ಆಂತರಿಕವಾಗಿ ಅದು ಖಾಲಿ. ಜನರು ಪರಸ್ಪರ ಸಂಪರ್ಕದಲ್ಲಿರುವಂತೆ ಕಾಣುತ್ತಾರೆ, ಆದರೆ ಅವರ ನಡುವೆ ಯಾವುದೇ ಆಳವಾದ ಸಂಬಂಧವಿಲ್ಲ. ಎಲಿಯಟ್ ನಗರವನ್ನು ಒಂದು 'ಆತ್ಮಶೂನ್ಯ ಪ್ರಪಂಚ'ವನ್ನಾಗಿ ಚಿತ್ರಿಸುತ್ತಾನೆ. ಇಲ್ಲಿ ಸಂಭಾಷಣೆಗಳಿವೆ, ಆದರೆ ಅರ್ಥವಿಲ್ಲ; ಸಂಬಂಧಗಳಿವೆ, ಆದರೆ ನಿಜವಾದ ಸಂಪರ್ಕವಿಲ್ಲ. ಇದು 'ಸಮೂಹದೊಳಗಿನ ಪರಕೀಯತೆ' (Alienation Within The Crowd). ಅಂದರೆ ವ್ಯಕ್ತಿ ಒಬ್ಬಂಟಿಯಾಗಿರುವುದರಿಂದ ಮಾತ್ರವಲ್ಲ, ಜನರ ನಡುವೆ ಇದ್ದರೂ ಒಂಟಿಯಾಗಿರುವ ಅನುಭವದಿಂದ ಪರಕೀಯನಾಗುತ್ತಾನೆ. ಇದು ಆಧುನಿಕ ನಗರ ನಾಗರಿಕತೆಯ ಪ್ರಮುಖ ಲಕ್ಷಣ.

ಇದರ ಮತ್ತೊಂದು ಗಾಢವಾದ ರೂಪವನ್ನು ಸ್ಯಾಮ್ಯುಯೆಲ್ ಬೆಕೆಟ್‌ನ ವೇಯಿಟಿಂಗ್ ಫಾರ್ ಗೋಡೋ ನಾಟಕದಲ್ಲಿ ಕಾಣಬಹುದು. ಇಲ್ಲಿ ಎಸ್ಟ್ರಾಗನ್ ಮತ್ತು ವ್ಲಾಡಿಮಿರ್ ಎಂಬ ಪಾತ್ರಗಳು 'ಗೋಡೋ' ಎಂಬ ಯಾರೋ ಬರಬೇಕೆಂದು ನಿರೀಕ್ಷಿಸುತ್ತಾ ಕಾಲ ಕಳೆಯುತ್ತವೆ. ಆದರೆ ಆ 'ಗೋಡೋ' ಎಂದಿಗೂ ಬರುವುದಿಲ್ಲ. ಈ ನಿರೀಕ್ಷೆ ಕೇವಲ ಕಥಾನಕವಲ್ಲ. ಅದು ಮಾನವ ಜೀವನದ ರೂಪಕ. ವ್ಯಕ್ತಿ ಯಾವಾಗಲೂ ಯಾವುದೋ ಅರ್ಥ, ಉದ್ದೇಶ ಅಥವಾ ಪೂರ್ಣತೆಯನ್ನು ನಿರೀಕ್ಷಿಸುತ್ತಾನೆ, ಆದರೆ ಆ ಅರ್ಥ ಯಾವಾಗಲೂ ದೂರದಲ್ಲೇ ಉಳಿಯುತ್ತದೆ. ಇಲ್ಲಿ ಪರಕೀಯತೆ 'ಕಾಲ' ಮತ್ತು 'ಅರ್ಥ'ಗಳ ನಡುವಿನ ವಿಘಟನೆ. ಬೆಕೆಟ್‌ನ ನಾಟಕದಲ್ಲಿ ಸಂಭಾಷಣೆಗಳೂ ಪುನರಾವರ್ತಿತವಾಗಿವೆ, ಕ್ರಿಯೆಗಳೂ ನಿರರ್ಥಕವಾಗಿವೆ. ಈ ಪುನರಾವರ್ತನೆಯಲ್ಲೇ ಮಾನವ ಜೀವನದ ಖಾಲಿತನ ವ್ಯಕ್ತವಾಗುತ್ತದೆ. ವ್ಯಕ್ತಿ ಬದುಕುತ್ತಾನೆ, ಆದರೆ ಅವನ ಬದುಕಿಗೆ ಯಾವುದೇ ಸ್ಪಷ್ಟ ದಿಕ್ಕು ಅಥವಾ ಗುರಿ ಇಲ್ಲ.

ಈ ಮೂರು ಸಾಹಿತ್ಯ ಕೃತಿಗಳನ್ನು ಒಟ್ಟಾಗಿ ನೋಡಿದರೆ, ಪರಕೀಯತೆಯು ಬಹುಮಟ್ಟದ ಅನುಭವವಾಗುತ್ತದೆ. ಕಾಫ್ಕಾನಲ್ಲಿ ಅದು ಅಸ್ತಿತ್ವದ ವೈಯಕ್ತಿಕ ದುರಂತವಾದರೆ, ಎಲಿಯಟ್‌ನಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಘಟನೆ ಮತ್ತು ಬೆಕೆಟ್‌ನಲ್ಲಿ ಅರ್ಥ ಮತ್ತು ಕಾಲದ ಖಾಲಿತನ. ಅಂತಿಮವಾಗಿ ಸಾಹಿತ್ಯವು ನಮಗೆ ಪರಕೀಯತೆ ಎಂಬುದು ಕೇವಲ ಒಂದು ತತ್ವಶಾಸ್ತ್ರೀಯ ಪರಿಕಲ್ಪನೆ ಅಲ್ಲ, ಅದು

ಬದುಕಿನ ಅನುಭವ ಎಂಬ ಸತ್ಯವನ್ನು ಮನದಟ್ಟು ಮಾಡುತ್ತದೆ. ವ್ಯಕ್ತಿಯು ತನ್ನದೇ ದೇಹದಲ್ಲಿ, ತನ್ನ ಸಮಾಜದಲ್ಲಿ ಮತ್ತು ತನ್ನ ಕಾಲದಲ್ಲೇ ಅನ್ಯನಾಗುವ ಕ್ಷಣ– ಅದೇ ಸಾಹಿತ್ಯದ ಆಳವಾದ ಸತ್ಯ. ಈ ಹಿನ್ನೆಲೆಯಲ್ಲಿ ಸಾಹಿತ್ಯವು ಪರಕೀಯತೆಯನ್ನು ಕೇವಲ ವಿವರಿಸುವುದಲ್ಲ, ಅದನ್ನು ನಮಗೆ ಅನುಭವಿಸಲು ಸಾಧ್ಯವಾಗುವಂತೆ ಮಾಡುತ್ತದೆ.

**ಅಂತರಂಗದ ಪರಕೀಯತೆ: ಆತ್ಮದಿಂದ ದೂರವಾಗುವಿಕೆ**

ಅಂತರಂಗದ ಪರಕೀಯತೆ (Inner Alienation) ಎಂದರೆ, ವ್ಯಕ್ತಿಯು ತನ್ನದೇ ಭಾವನೆಗಳು ಮತ್ತು ಆಂತರಿಕ ಸ್ವರೂಪದಿಂದ ದೂರವಾಗುವ ಸ್ಥಿತಿ. ಇದು ಹೊರಗಿನ ಸಮಾಜದ ಒತ್ತಡಗಳಿಂದ ಪ್ರಾರಂಭವಾದರೂ, ಅಂತಿಮವಾಗಿ ವ್ಯಕ್ತಿಯ ಮನಸ್ಸಿನೊಳಗೆ ಆಳವಾಗಿ ನೆಲೆಸುವ ಸ್ಥಿತಿ. ಇಲ್ಲಿ 'ನಾನು' ಎಂಬ ಅಸ್ತಿತ್ವವೇ ಎರಡು ಹೋಳಾಗುತ್ತದೆ: ಒಂದು ಅನುಭವಿಸುವ 'ನಾನು', ಮತ್ತೊಂದು ನಿಯಂತ್ರಿಸಲ್ಪಡುವ 'ನಾನು'. ಎರಿಕ್ ಫ್ರಾಮ್‌ನ ಪ್ರಕಾರ, ಆಧುನಿಕ ಸಮಾಜದಲ್ಲಿ ವ್ಯಕ್ತಿಯು ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದ್ದಾನೆ. "Modern man is alienated from himself, from his fellow men, and from nature." (The Art of Loving, p–86) ಎನ್ನುವ ಮೂಲಕ ಫ್ರಾಮ್ ಮನುಷ್ಯನು ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಹೇಗೆ ಪ್ರತ್ಯೇಕತೆಯನ್ನು ಹೊಂದುತ್ತಾನೆ ಎನ್ನುವುದನ್ನು ಸ್ಪಷ್ಟಪಡಿಸುತ್ತಾನೆ. ಅವನ ದಿ ಸೇನ್ ಸೊಸೈಟಿ ಮತ್ತು ಎಸ್ಕೇಪ್ ಫ್ರಮ್ ಫ್ರೀಡಮ್ ಕೃತಿಗಳಲ್ಲಿ ಇದನ್ನು ಇನ್ನಷ್ಟು ವಿವರಿಸಿ ಮಾನವನು ಸ್ವಾತಂತ್ರ್ಯವನ್ನು ಬಯಸಿದರೂ, ಅದೇ ಸಮಯದಲ್ಲಿ ಅದರಿಂದ ಹೆದರುತ್ತಾನೆನ್ನುವುದನ್ನು ತೋರಿಸುತ್ತಾನೆ. ಈ ಭಯದಿಂದ ತಪ್ಪಿಸಿಕೊಳ್ಳಲು, ಅವನು ತನ್ನ ಸ್ವಾತಂತ್ರ್ಯವನ್ನು ಬದಿಗಿಟ್ಟು ಸಮಾಜದ ನಿರೀಕ್ಷೆಗಳಿಗೆ ತಾನು ಹೊಂದಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ಪ್ರಕ್ರಿಯೆಯಲ್ಲಿ ವ್ಯಕ್ತಿ ತನ್ನ ನಿಜವಾದ ಆಸೆಗಳು, ಭಾವನೆಗಳು ಮತ್ತು ಚಿಂತನೆಗಳನ್ನು ದಮನಿಸುತ್ತಾನೆ. ಅವನು 'ತಾನು ಯಾರು' ಎಂಬುದನ್ನು ಅರಿಯುವ ಬದಲು, 'ಇತರರು ತನ್ನಿಂದ ಏನು ನಿರೀಕ್ಷಿಸುತ್ತಾರೆ' ಎಂಬುದನ್ನು ಪಾಲಿಸಲು ಪ್ರಾರಂಭಿಸುತ್ತಾನೆ. ಹೀಗಾಗಿ, ಅವನ ವ್ಯಕ್ತಿತ್ವವು ಒಂದು 'ನಕಲಿ ಸ್ವರೂಪ'ವಾಗಿ ರೂಪುಗೊಳ್ಳುತ್ತದೆ. ಈ ಸಂದರ್ಭದಲ್ಲಿ, ವ್ಯಕ್ತಿ ತನ್ನೊಳಗೇ ಅನ್ಯನಾಗುತ್ತಾನೆ. ಅವನು ಬದುಕುತ್ತಾನೆ, ಆದರೆ ತನ್ನ ಬದುಕಿನೊಂದಿಗೆ ಆಂತರಿಕ ಸಂಬಂಧ ಹೊಂದುವುದಿಲ್ಲ. ಅವನ ಕ್ರಿಯೆಗಳು ಸಮಾಜದ ಒತ್ತಡಗಳ ಪ್ರತಿಫಲನವಾಗುತ್ತವೆ. ಫ್ರಾಮ್‌ನ ದೃಷ್ಟಿಯಲ್ಲಿ ಈ ಅಂತರಂಗದ ಪರಕೀಯತೆ ಆಧುನಿಕ ಮಾನವನ ಪ್ರಮುಖ ಸಂಕಟ. ವ್ಯಕ್ತಿ ಹೊರಗೆ ಯಶಸ್ವಿಯಾಗಿದ್ದರೂ, ಒಳಗೆ ಖಾಲಿತನವನ್ನು ಅನುಭವಿಸುತ್ತಾನೆ, ಏಕೆಂದರೆ ಅವನು ತನ್ನ ನಿಜ ರೂಪದಲ್ಲಿ ಬದುಕುವುದಿಲ್ಲ, ಒಂದು ಸಾಮಾಜಿಕ ಪಾತ್ರವನ್ನು ನಿರ್ವಹಿಸುತ್ತಾನಷ್ಟೆ.

ಇದನ್ನೇ ಇನ್ನಷ್ಟು ಆಳವಾಗಿ ಮನೋವಿಜ್ಞಾನಾತ್ಮಕವಾಗಿ ವಿವರಿಸುವುದು ಸಿಗ್ಮಂಡ್ ಫ್ರಾಯ್ಡ್‌ನ ತತ್ವ. ಫ್ರಾಯ್ಡ್‌ನ ಪ್ರಕಾರ ಮಾನವ ಮನಸ್ಸು ಮೂರು

ಭಾಗಗಳಿಂದ ಕೂಡಿದೆ: Id (ಪ್ರಾಕೃತಿಕ ಆಸೆಗಳು), Ego (ವಾಸ್ತವಿಕತೆಯ ಅರಿವು), Superego (ನೈತಿಕ ನಿಯಂತ್ರಣ). ಈ ಮೂರು ಭಾಗಗಳ ನಡುವೆ ಸದಾ ಸಂಘರ್ಷ ನಡೆಯುತ್ತದೆ. Id ಆನಂದ, ಇಚ್ಛೆ ಮತ್ತು ಪ್ರೇರಣೆಗಳೆಂಬ ವ್ಯಕ್ತಿಯ ಮೂಲಭೂತ ಆಸೆಗಳನ್ನು ಪ್ರತಿನಿಧಿಸುತ್ತದೆ. Superego ಸಮಾಜದ ನಿಯಮಗಳು ಮತ್ತು ನೈತಿಕ ಮೌಲ್ಯಗಳನ್ನು ಪ್ರತಿನಿಧಿಸುತ್ತದೆ. Ego ಈ ಎರಡರ ನಡುವೆ ಸಮತೋಲನ ಸಾಧಿಸಲು ಪ್ರಯತ್ನಿಸುತ್ತದೆ. ಆದರೆ, ಈ ಸಮತೋಲನ ಸಾಧಿಸುವುದು ಎಲ್ಲಾ ಸಂದರ್ಭದಲ್ಲಿಯೂ ಸುಲಭವಲ್ಲ. ಅನೇಕ ಸಂದರ್ಭಗಳಲ್ಲಿ, ವ್ಯಕ್ತಿ ತನ್ನ ಆಸೆಗಳನ್ನು ದಮನಿಸಬೇಕಾಗುತ್ತದೆ, ಅಥವಾ ತನ್ನ ನೈತಿಕ ಮೌಲ್ಯಗಳನ್ನು ಮೀರಿ ನಡೆಯಬೇಕಾಗುತ್ತದೆ. ಈ ಸಂಘರ್ಷವೇ ವ್ಯಕ್ತಿಯೊಳಗಿನ ವಿಭಜನೆಗೆ ಕಾರಣವಾಗುತ್ತದೆ. ವ್ಯಕ್ತಿ ತನ್ನ ಅಚೇತನ ಆಸೆಗಳನ್ನು ಅರಿಯುವುದಿಲ್ಲ, ಆದರೆ ಅವು ಅವನ ವರ್ತನೆಯ ಮೇಲೆ ಪ್ರಭಾವ ಬೀರುತ್ತವೆ. ಹೀಗಾಗಿ, ಅವನು ತನ್ನದೇ ಕ್ರಿಯೆಗಳ ಮೂಲವನ್ನು ಅರ್ಥಮಾಡಿಕೊಳ್ಳಲಾರನು. ಇದು 'ಮನಸ್ಸಿನ ಆಂತರಿಕ ಪರಕೀಯತೆ' (Psychic Alienation). ಈ ಅಂತರಂಗದ ಪರಕೀಯತೆಯ ಪರಿಣಾಮವಾಗಿ, ವ್ಯಕ್ತಿ ತನ್ನ ಭಾವನೆಗಳನ್ನು ನೇರವಾಗಿ ಅನುಭವಿಸುವುದಿಲ್ಲ. ಅವನು ತನ್ನ ದುಃಖವನ್ನು ಮರೆಮಾಡಬಹುದು, ತನ್ನ ಸಂತೋಷವನ್ನು ದಮನಿಸಬಹುದು, ಅಥವಾ ತನ್ನ ಕೋಪವನ್ನು ಅರಿಯದೆ ಇರಬಹುದು. ಈ ದಮನಿತ ಭಾವನೆಗಳು ಅವನೊಳಗೆ ಒತ್ತಡವನ್ನು ಸೃಷ್ಟಿಸುತ್ತವೆ. ಹೀಗಾಗಿ ಅವನು ತನ್ನೊಳಗಿನ ಜಗತ್ತಿನೊಂದಿಗೆ ಸಂಪರ್ಕ ಕಳೆದುಕೊಳ್ಳುತ್ತಾನೆ.

ಫ್ರಾಮ್ ಮತ್ತು ಫ್ರಾಯ್ಡ್ ಇಬ್ಬರೂ ಹೇಳುವುದೇನೆಂದರೆ, ಪರಕೀಯತೆ ಕೇವಲ ಹೊರಗಿನ ಸಮಾಜದ ಸಮಸ್ಯೆಯಲ್ಲ, ಅದು ವ್ಯಕ್ತಿಯ ಮನಸ್ಸಿನ ಆಂತರಿಕ ರಚನೆಯಲ್ಲಿಯೇ ನೆಲೆಸಿದೆ. ಒಂದೆಡೆ ಸಮಾಜದ ಒತ್ತಡಗಳು, ಮತ್ತೊಂದೆಡೆ ಮನಸ್ಸಿನ ಸಂಘರ್ಷಗಳು– ಇವುಗಳು ಸೇರಿ ವ್ಯಕ್ತಿಯನ್ನು ತನ್ನದೇ ಆತ್ಮದಿಂದ ದೂರ ಮಾಡುತ್ತವೆ. ಅಂತಿಮವಾಗಿ, ಅಂತರಂಗದ ಪರಕೀಯತೆ ನಮಗೆ ಒಂದು ಗಾಢವಾದ ಪ್ರಶ್ನೆಯನ್ನು ಮುಂದಿಡುತ್ತದೆ: 'ನಾನು ನಿಜವಾಗಿಯೂ ನನ್ನ ಭಾವನೆಗಳನ್ನು ಬದುಕುತ್ತಿದ್ದೇನಾ, ಅಥವಾ ನಾನು ನನ್ನೊಳಗಿನ ಸ್ವರೂಪದಿಂದ ದೂರವಾಗಿ ಒಂದು ಪಾತ್ರವನ್ನು ಮಾತ್ರ ನಿರ್ವಹಿಸುತ್ತಿದ್ದೇನಾ?' ಈ ಪ್ರಶ್ನೆಗೆ ಪ್ರಾಮಾಣಿಕ ಉತ್ತರ ಹುಡುಕುವುದು, ವ್ಯಕ್ತಿಯ ಆತ್ಮಪರಿಚಯದ ಮೊದಲ ಪ್ರಯತ್ನ.

**ಪರಕೀಯತೆ– ಆಧುನಿಕ ಮಾನವನ ಐಡೆಂಟಿಟಿ**

ಪರಕೀಯತೆ ಎಂಬುದು ಕೇವಲ ಒಂದು ವೈಯಕ್ತಿಕ ಸಮಸ್ಯೆ ಅಥವಾ ಮಾನಸಿಕ ಸ್ಥಿತಿಯಲ್ಲ, ಅದು ಆಧುನಿಕ ಮಾನವನ ಅಸ್ತಿತ್ವದ ಮೂಲಭೂತ ಲಕ್ಷಣವಾಗಿದೆ. ಆಧುನಿಕ ಸಮಾಜವು ವಿಜ್ಞಾನ, ತಂತ್ರಜ್ಞಾನ, ಕೈಗಾರಿಕೆ ಮತ್ತು ನಗರೀಕರಣದ ಮೂಲಕ ಅಪಾರ ಪ್ರಗತಿಯನ್ನು ಸಾಧಿಸಿದರೂ, ಈ ಪ್ರಗತಿಯ ಆಂತರ್ಯದಲ್ಲಿ ಮಾನವನು ತನ್ನದೇ ಬದುಕಿನಿಂದ ದೂರವಾಗುತ್ತಿರುವ ಒಂದು ಗಾಢ ಸತ್ಯ ಅಡಗಿದೆ. ಹಾಗಾಗಿ ಪರಕೀಯತೆಯೆನ್ನುವುದು ಆಧುನಿಕತೆಯ

ಅನಿವಾರ್ಯ ಪರಿಣಾಮ; ಪರಕೀಯತೆ ಎಂಬುದು ಆಧುನಿಕ ಮಾನವನ ಬದುಕಿನ ಅವಿಭಾಜ್ಯ ಅಂಗವಾಗಿದೆ. ಮಾರ್ಕ್ಸ್‌ನ ಆರ್ಥಿಕ ಅನ್ಯತೆಯಿಂದ ಹಿಡಿದು ಸಾರ್ತ್ರೆ–ಕಾಮೂರ ಅಸ್ತಿತ್ವವಾದದ ತಳಮಳದವರೆಗೆ, ಡರ್ಕಿಮ್–ವೆಬರ್‌ರ ಸಾಮಾಜಿಕ ವಿಘಟನೆಯಿಂದ ಕಾಫ್ಕಾ–ಎಲಿಯಟ್–ಬೆಕೆಟ್‌ರ ಸಾಹಿತ್ಯಕ ಅಭಿವ್ಯಕ್ತಿಯವರೆಗೆ– ಈ ತಾತ್ವಿಕ ಯಾನವು ನಮಗೊಂದು ಕಟು ಸತ್ಯವನ್ನು ಸಾರುತ್ತದೆ: ಮಾನವನು ತನ್ನ ಕೆಲಸದಲ್ಲಿ, ತನ್ನೊಳಗೇ, ತನ್ನ ಸಮಾಜದಲ್ಲಿ ಮತ್ತು ತನ್ನ ಅನುಭವದಲ್ಲೇ ಅನ್ಯನಾಗುತ್ತಿರುವುದು ಒಂದು ಐತಿಹಾಸಿಕ ದುರಂತವಲ್ಲ, ಅದು ಆಧುನಿಕತೆಯ ಸ್ವಭಾವ.

ಮಾರ್ಕ್ಸ್ ಹೇಳಿದಂತೆ, ಕಾರ್ಖಾನೆಯಲ್ಲಿ ದಿನವಿಡೀ ಒಂದೇ ಯಂತ್ರದ ಮುಂದೆ ನಿಂತು ಕೆಲಸ ಮಾಡುವ ಕಾರ್ಮಿಕನು ತಾನು ಸೃಷ್ಟಿಸುವ ವಸ್ತುವಿನ ಮೇಲೆ ಯಾವುದೇ ಒಡೆತನ ಅಥವಾ ಆತ್ಮೀಯತೆ ಹೊಂದಿರುವುದಿಲ್ಲ. ಅವನ ಶ್ರಮ ಬೇರೊಬ್ಬರ ಲಾಭಕ್ಕಾಗಿ ಬಳಕೆಯಾಗುತ್ತದೆ. ಇಂದಿನ ಡಿಜಿಟಲ್ ಯುಗದಲ್ಲಿ ಇದು ಇನ್ನಷ್ಟು ಸೂಕ್ಷ್ಮವಾಗಿದೆ. ಸಾಫ್ಟ್‌ವೇರ್ ಇಂಜಿನಿಯರ್ ತಾನು ಬರೆಯುವ ಕೋಡ್‌ನ ಅಂತಿಮ ಉದ್ದೇಶವೇನೆಂದು ಅರಿಯದೆ, ಕೇವಲ ಒಂದು ಸಣ್ಣ ಪ್ರಮಾಣದ ಕೆಲಸವನ್ನು ಮಾಡುತ್ತಾ, ತನ್ನ ಸೃಜನಶೀಲತೆಯನ್ನೇ ಕಳೆದುಕೊಳ್ಳುತ್ತಾನೆ. ಇದು ಕೇವಲ ಆರ್ಥಿಕ ಶೋಷಣೆಯಲ್ಲ, ಇದು ಆತ್ಮದ ವಿಘಟನೆ. ಸಾರ್ತ್ರೆಯ ದೃಷ್ಟಿಯಲ್ಲಿ, ಮಾನವನು ತನ್ನ ಆಯ್ಕೆಗಳ ಮೂಲಕ ತನ್ನನ್ನು ರೂಪಿಸಿಕೊಳ್ಳಬೇಕಾಗಿರುವ ಅನಿವಾರ್ಯತೆಯಲ್ಲೇ ಪರಕೀಯತೆ ಅಡಗಿದೆ. ಒಬ್ಬ ಯುವಕನು ಸಮಾಜ ನಿರೀಕ್ಷಿಸುವ ಉದ್ಯೋಗ, ಮದುವೆ, ಜೀವನಶೈಲಿಯನ್ನು ಅನುಸರಿಸುತ್ತಾ, ಒಂದು ದಿನ ಕನ್ನಡಿಯ ಮುಂದೆ ನಿಂತು 'ಇದು ನಿಜವಾಗಿಯೂ ನಾನೇನಾ?' ಎಂದು ಪ್ರಶ್ನಿಸಿಕೊಂಡಾಗಲೇ ಸಾರ್ತ್ರೆ ಹೇಳುವ ಆಂತರಿಕ ಪರಕೀಯತೆಯು ಉಂಟಾಗುತ್ತದೆ. ಕಾಮೂನ ದಿ ಸ್ಟ್ರೇಂಜರ್ ಕಾದಂಬರಿಯ ಮೆರ್ಸಾಲ್ಟ್ ತನ್ನ ತಾಯಿಯ ಮೃತ್ಯುವಿಗೂ ಕಣ್ಣೀರು ಸುರಿಸಲಾರ. ಅವನು ಬದುಕಿನ ಮಧ್ಯದಲ್ಲಿದ್ದರೂ, ಬದುಕಿನಿಂದ ದೂರವಿದ್ದಾನೆ– ಇದು ಅಸ್ತಿತ್ವವಾದದ ಪರಕೀಯತೆಯ ಅತ್ಯಂತ ನೋವಿನ ಚಿತ್ರಣ. ಡರ್ಕಿಮ್ ಗುರುತಿಸಿದ ಅನೋಮಿ, ಅಂದರೆ ಮೌಲ್ಯಗಳ ಕುಸಿತದಿಂದ ಉಂಟಾಗುವ ಶೂನ್ಯತೆ ಇಂದಿನ ಭಾರತೀಯ ಸಮಾಜದಲ್ಲೂ ಸ್ಪಷ್ಟವಾಗಿ ಕಾಣಿಸುತ್ತದೆ. ಹಳ್ಳಿಗಳಿಂದ ನಗರಕ್ಕೆ ವಲಸೆ ಬಂದ ವ್ಯಕ್ತಿ, ತನ್ನ ಹಳೆಯ ಸಂಸ್ಕೃತಿ, ಭಾಷೆ, ಸಂಬಂಧಗಳಿಂದ ಬೇರ್ಪಟ್ಟು ನಗರದ ಜೀವನದಲ್ಲೂ ನೆಲೆಯಿಲ್ಲದೆ ತೇಲಾಡುತ್ತಾನೆ. ಅವನು ಎರಡು ಜಗತ್ತುಗಳ ನಡುವೆ ಸಿಲುಕಿ, ಯಾವ ಜಗತ್ತಿಗೂ ಸೇರದವನಾಗಿ ಉಳಿಯುತ್ತಾನೆ. ಇದು ಡರ್ಕಿಮ್‌ನ ಸಾಮಾಜಿಕ ಪರಕೀಯತೆಯ ಜೀವಂತ ನಿದರ್ಶನ. ಕಾಫ್ಕಾನ ಮೆಟಮಾರ್ಫೋಸಿಸ್‌ನಲ್ಲಿ ಗ್ರೆಗರ್ ಸಾಮ್ಸಾ ಕೀಟವಾಗುವುದು ಕೇವಲ ರೂಪಕವಲ್ಲ. ಆಧುನಿಕ ಮಾನವನು ಪ್ರತಿದಿನ ಬೆಳಿಗ್ಗೆ ಎದ್ದು, ತನಗೆ ಇಷ್ಟವಿಲ್ಲದ ಕೆಲಸಕ್ಕೆ ಹೋಗಿ, ಅರ್ಥವಿಲ್ಲದ ಸಭೆಗಳಲ್ಲಿ ಕುಳಿತು, ರಾತ್ರಿ ಮನೆಗೆ ಮರಳುವಾಗ ಅವನೂ ಒಂದು ಅರ್ಥದಲ್ಲಿ ಕೀಟವಾಗಿ ರೂಪಾಂತರಗೊಂಡಿರುತ್ತಾನೆ. ಬೆಕೆಟ್‌ನ ವೇಯಿಟಿಂಗ್ ಫಾರ್

ಗೋಡೋದಲ್ಲಿ ವ್ಲಾಡಿಮಿರ್ ಮತ್ತು ಎಸ್ಟ್ರಾಗನ್ ಯಾರೋ ಒಬ್ಬ ಬರುವನೆಂದು ಕಾಯುತ್ತಲೇ ಇರುತ್ತಾರೆ. ಆದರೆ ಆ ಗೋಡೋ ಎಂದಿಗೂ ಬರುವುದಿಲ್ಲ. ಇದು ಇಂದಿನ ಮಾನವನ ಚಿತ್ರಣ: ನಿವೃತ್ತಿಯ ನಂತರ ಬದುಕುತ್ತೇನೆ, ಸಮಯ ಸಿಕ್ಕಾಗ ಕನಸು ಈಡೇರಿಸುತ್ತೇನೆ ಎಂದು ಕಾಯುತ್ತಲೇ ಕಾಲ ಕಳೆಯುವ ಸ್ಥಿತಿ. ಸಾಮಾಜಿಕ ಮಾಧ್ಯಮಗಳ ಯುಗದಲ್ಲಂತೂ ಈ ಪರಕೀಯತೆ ಹೊಸ ಆಯಾಮ ಪಡೆದಿದೆ. ಸಾವಿರಾರು 'ಗೆಳೆಯ'ರಿದ್ದರೂ ನಿಜವಾದ ಸಂಬಂಧ ಇಲ್ಲ; ನೂರಾರು 'ಲೈಕ್'ಗಳು ಬಂದರೂ ಮನಸ್ಸಿನ ಆಳದ ಬಿಕ್ಕಟ್ಟನ್ನು ಹೇಳಿಕೊಳ್ಳಲು ಯಾರೂ ಇಲ್ಲ ಎಂಬ ಭಾವ. ಇದು ಇಂದಿನ ಡಿಜಿಟಲ್ ಪರಕೀಯತೆ. ಮಾನವನು ಜಗತ್ತಿನೊಂದಿಗೆ ಹಿಂದೆಂದಿಗಿಂತಲೂ ಹೆಚ್ಚು ಸಂಪರ್ಕಿತನಾಗಿದ್ದಾನೆ, ಆದರೆ ತನ್ನೊಳಗೇ ಇಷ್ಟು ಏಕಾಂಗಿಯಾಗಿ ಎಂದೂ ಇರಲಿಲ್ಲ.

ಆದರೆ ಈ ಯಾನದ ಮೌಲ್ಯ ಇರುವುದು ಪರಕೀಯತೆಯ ಅನ್ವೇಷಣೆಯಲ್ಲಿ ಮಾತ್ರವಲ್ಲ, ಅದನ್ನು ನೇರವಾಗಿ ಎದುರಿಸುವ ಧೈರ್ಯದಲ್ಲಿ. 'ನಾನು ಬದುಕುತ್ತಿರುವ ಜೀವನ ನಿಜವಾಗಿಯೂ ನನ್ನದೇನಾ, ಅಥವಾ ನಾನು ನನ್ನದೇ ಬದುಕಿನಲ್ಲಿ ಅತಿಥಿಯೇ?' ಎಂಬ ಪ್ರಶ್ನೆ ಅಸೌಕರ್ಯಕರವಾದರೂ, ಅದೇ ಪ್ರಶ್ನೆ ತತ್ವಶಾಸ್ತ್ರ, ಸಾಹಿತ್ಯ ಮತ್ತು ಮಾನವೀಯ ಚಿಂತನೆಯ ಜೀವಾಳ. ಈ ಪ್ರಶ್ನೆಯನ್ನು ಕೇಳಿಕೊಳ್ಳುವ ಧೈರ್ಯ ತೋರಿದ ಪ್ರತಿಯೊಬ್ಬ ಮಾನವನೂ– ಮಾರ್ಕ್ಸ್‌ನ ಕಾರ್ಮಿಕನಾಗಿರಲಿ, ಕಾಫ್ಕಾನ ನೌಕರನಾಗಿರಲಿ, ಇಂದಿನ ಡಿಜಿಟಲ್ ಪ್ರಪಂಚದ ಒಂಟಿ ವ್ಯಕ್ತಿಯಾಗಿರಲಿ– ತನ್ನ ಅಸ್ತಿತ್ವದ ಅರ್ಥವನ್ನು ಹುಡುಕುವ ದಾರಿಯಲ್ಲಿ ಒಂದು ಹೆಜ್ಜೆ ಮುಂದಿಟ್ಟಿರುತ್ತಾನೆ. ಪರಕೀಯತೆಯನ್ನು ಅರಿತುಕೊಳ್ಳುವುದು ಅದನ್ನು ಮೀರಿಸುವ ಮೊದಲ ಹೆಜ್ಜೆ. ಅಸ್ತಿತ್ವ ಮತ್ತು ಅಂತರದ ನಡುವೆ ಸಾಗುವ ಈ ಯಾನ ಇನ್ನೂ ಮುಗಿದಿಲ್ಲ, ಏಕೆಂದರೆ ಮಾನವನು ಪ್ರಶ್ನಿಸುವುದನ್ನು ಇನ್ನೂ ನಿಲ್ಲಿಸಿಲ್ಲ.

## ಪರಾಮರ್ಶನ ಗ್ರಂಥಗಳು:


1. ಎಲಿಯಟ್, ಟಿ. ಎಸ್., (2002), ದಿ ವೇಸ್ಟ್ ಲ್ಯಾಂಡ್ ಅಂಡ್ ಅದರ್ ಪೋಯಮ್ಸ್, ಲಂಡನ್: ಫೇಬರ್ ಅಂಡ್ ಫೇಬರ್.
2. ಕಾಫ್ಕಾ, ಫ್ರಾಂರ್ಝ್., (2020), ದಿ ಮೆಟಮಾರ್ಫೋಸಿಸ್ ಅಂಡ್ ಅದರ್ ಸ್ಟೋರೀಸ್ (ಅನು: ಸ್ಟಾನ್ಲಿ ಕಾರ್ನ್‌ಗೋಲ್ಡ್), ಲಂಡನ್: ಪೆಂಗ್ವಿನ್ ಕ್ಲಾಸಿಕ್ಸ್.
3. ಕಾಮ್ಯೂ, ಅಲ್ಬರ್ಟ್., (1989), ದಿ ಸ್ಟ್ರೇಂಜರ್ (ಅನುವಾದ: ಮ್ಯಾಥ್ಯು ವಾರ್ಡ್), ನ್ಯೂಯಾರ್ಕ್: ವಿಂಟೇಜ್ ಇಂಟರ್‌ನ್ಯಾಷನಲ್.
4. ಕಾಮ್ಯೂ, ಅಲ್ಬರ್ಟ್., (1991), ದಿ ಮಿಥ್ ಆಫ್ ಸಿಸಿಫಸ್ (ಅನು: ಜಸ್ಟಿನ್ ಓ'ಬ್ರಿಯಾನ್), ನ್ಯೂಯಾರ್ಕ್: ವಿಂಟೇಜ್ ಬುಕ್ಸ್.
5. ಡರ್ಕಿಮ್, ಎಮಿಲ್., (1951), ಸೂಸೈಡ್: ಎ ಸ್ಟಡಿ ಇನ್ ಸೋಷಿಯಾಲಜಿ (ಅನು: ಜಾನ್ ಎ. ಸ್ಪಾಲ್ಡಿಂಗ್ ಮತ್ತು ಜಾರ್ಜ್ ಸಿಂಪ್ಸನ್), ನ್ಯೂಯಾರ್ಕ್: ಫ್ರೀ ಪ್ರೆಸ್.
6. ಡರ್ಕಿಮ್, ಎಮಿಲ್., (1984), ದಿ ಡಿವಿಷನ್ ಆಫ್ ಲೇಬರ್ ಇನ್ ಸೊಸೈಟಿ (ಅನು: ಡಬ್ಲ್ಯೂ. ಡಿ. ಹಾಲ್ಸ್), ನ್ಯೂಯಾರ್ಕ್: ಫ್ರೀ ಪ್ರೆಸ್.
7. ಫ್ರಾಮ್, ಎರಿಕ್., (2001), ದಿ ಸೇನ್ ಸೊಸೈಟಿ, ಲಂಡನ್: ರೂಟ್ಲೆಜ್.
8. ಫ್ರಾಮ್, ಎರಿಕ್., (2006), ದಿ ಆರ್ಟ್ ಆಫ್ ಲವಿಂಗ್, ನ್ಯೂಯಾರ್ಕ್: ಹಾರ್ಪರ್ ಪೆರೆನ್ನಿಯಲ್ ಮಾಡರ್ನ್ ಕ್ಲಾಸಿಕ್ಸ್.
9. ಫ್ರಾಮ್, ಎರಿಕ್., (1941), ಎಸ್ಕೇಪ್ ಫ್ರಮ್ ಫ್ರೀಡಮ್, ನ್ಯೂಯಾರ್ಕ್: ಫರಾರ್ & ರೈನ್ಹಾರ್ಟ್.
10. ಫ್ರಾಯ್ಡ್, ಸಿಗ್ಮಂಡ್., (1960), ದಿ ಈಗೋ ಅಂಡ್ ದ ಐಡ್ (ಅನು: ಜೋನ್ ರಿವಿಯರ್), ನ್ಯೂಯಾರ್ಕ್: ಡಬ್ಲ್ಯೂ. ಡಬ್ಲ್ಯೂ. ನಾರ್ಟನ್ & ಕಂಪನಿ.
11. ಫ್ರಾಯ್ಡ್, ಸಿಗ್ಮಂಡ್., (1961), ಸಿವಿಲೈಸೇಶನ್ ಅಂಡ್ ಇಟ್ಸ್ ಡಿಸ್ಕಂಟೆಂಟ್ಸ್ (ಅನು: ಜೇಮ್ಸ್ ಸ್ಟ್ರೇಚಿ), ನ್ಯೂಯಾರ್ಕ್: ಡಬ್ಲ್ಯೂ. ಡಬ್ಲ್ಯೂ. ನಾರ್ಟನ್ & ಕಂಪನಿ.
12. ಬೆಕೆಟ್, ಸ್ಯಾಮ್ಯುಯೆಲ್., (1954), ವೇಯಿಟಿಂಗ್ ಫಾರ್ ಗೋಡೋ: ಎ ಟ್ರಾಜಿಕೊಮಿಡಿ ಇನ್ ಟು ಆಕ್ಟ್ಸ್, ನ್ಯೂಯಾರ್ಕ್: ಗ್ರೋವ್ ಪ್ರೆಸ್.
13. ಮಾರ್ಕ್ಸ್, ಕಾರ್ಲ್., (1959), ಎಕನಾಮಿಕ್ ಅಂಡ್ ಫಿಲಾಸಫಿಕ್ ಮ್ಯಾನುಸ್ಕ್ರಿಪ್ಟ್ ಆಫ್ 1844 (ಅನು: ಮಾರ್ಟಿನ್ ಮಿಲ್ಲಿಗನ್), ಮಾಸ್ಕೋ: ಪ್ರೋಗ್ರೆಸ್ ಪಬ್ಲಿಷರ್ಸ್.
14. ವೆಬರ್, ಮ್ಯಾಕ್ಸ್., (2001), ದಿ ಪ್ರೊಟೆಸ್ಟಂಟ್ ಎಥಿಕ್ ಅಂಡ್ ದ ಸ್ಪಿರಿಟ್ ಆಫ್ ಕ್ಯಾಪಿಟಲಿಸಮ್ (ಅನು: ಟಾಲ್ಕಾಟ್ ಪಾರ್ಸನ್ಸ್), ಲಂಡನ್: ರೂಟ್ಲೆಜ್.
15. ಸಾರ್ತ್ರೆ, ಜೀನ್–ಪಾಲ್., (1992), ಬೀಯಿಂಗ್ ಅಂಡ್ ನಥಿಂಗ್‌ನೆಸ್: ಆನ್ ಎಸ್ಸೇ ಆನ್ ಫಿನಾಮಿನಾಲಜಿಕಲ್ ಓಂಟಾಲಜಿ (ಅನು: ಹೇಜಲ್ ಇ. ಬಾರ್ನ್ಸ್), ನ್ಯೂಯಾರ್ಕ್: ವಾಷಿಂಗ್ಟನ್ ಸ್ಕ್ವೇರ್ ಪ್ರೆಸ್.
16. ಸಾರ್ತ್ರೆ, ಜೀನ್–ಪಾಲ್., (2007), ಎಕ್ಸಿಸ್ಟೆನ್ಸಿಯಲಿಸಮ್ ಇಸ್ ಎ ಹ್ಯೂಮನಿಸಮ್ (ಅನು: ಕ್ಯಾರೋಲ್ ಮ್ಯಾಕೋಂಬರ್), ನ್ಯೂ ಹೇವನ್: ಯೇಲ್ ಯುನಿವರ್ಸಿಟಿ ಪ್ರೆಸ್.